# ನಾಗರೀಕರ ಸನ್ನದು–2009

**ಬೆಂ.ಮ.ಸಾ.ಸಂಸ್ಥೆ– ಪ್ರಯಾಣಿಕರಿಗೆ ಸಂಪೂರ್ಣ ಖಾತರಿ**

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**

**ಕೇಂದ್ರ ಕಛೇರಿ, ಕೆ.ಹೆಚ್. ರಸ್ತೆ, ಬೆಂಗಳೂರು–560 027.**

**ವೆಬ್: www.bmtcinfo.com**

**ಈ–ಮೇಲ್: bmtc@bgl.vsnl.net.in**

**ಸಾರ್ವಜನಿಕ ಪ್ರಯಾಣಿಕರಿಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಂಪೂರ್ಣ ಹೊಣೆಗಾರಿಕೆ**

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
# ಕೇಂದ್ರ ಕಛೇರಿ, ಬೆಂಗಳೂರು-560 027.

# "ನಾಗರೀಕರ ಸನ್ನದು"

ಈ ನಾಗರೀಕರ ಸನ್ನದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರ ಹೊಣೆಗಾರಿಕೆಯಾಗಿ ಹಾಕಿಕೊಂಡಿರುವ ಮುಖ್ಯ ಧ್ಯೇಯೋದ್ದೇಶ ಕಾರ್ಯಕ್ರಮಗಳ ಪರಿಚಯ ನೀಡುತ್ತದೆ. ಈ ಸಂಸ್ಥೆಯು ಬೆಂಗಳೂರು ನಗರ ಹಾಗೂ ಸುತ್ತುಮುತ್ತಲಿನ ಪ್ರದೇಶಗಳ ಸಾರ್ವಜನಿಕರಿಗೆ ಪ್ರಯಾಣ ಸೌಕರ್ಯ ಒದಗಿಸುವ ಏಕೈಕ ಸಾರಿಗೆ ಸಂಸ್ಥೆಯಾಗಿರುತ್ತದೆ.

ಈ ಸನ್ನದು ಸಂಸ್ಥೆಯ ಮೂಲ ಉದ್ದೇಶ, ನಿಯಂತ್ರಣ, ಕಾರ್ಯವೈಖರಿ ಮತ್ತು ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಹಮ್ಮಿಕೊಂಡಿರುವ ಸೇವೆಗಳು ಮತ್ತು ಸೌಲಭ್ಯಗಳ ವಿವರಗಳನ್ನೊಳಗೊಂಡಿದೆ. ಸಂಸ್ಥೆಯು ಸಾರ್ವಜನಿಕರಿಗೆ ನೂತನವಾಗಿ ಒದಗಿಸಲಾಗಿರುವ ಸೇವೆಗಳ ಪರಿಚಯವನ್ನು ಸನ್ನದಿನಲ್ಲಿ ಪ್ರತಿವರ್ಷವು ಸೇರಿಸಲಾಗುತ್ತಿದೆ.

ಬೆಂಮಸಾಸಂಸ್ಥೆಯ ನಾಗರೀಕರ ಸನ್ನದ್ದನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

ಅ. ಮೊದಲಿಗೆ ಸಂಸ್ಥೆಯ ಧ್ಯೇಯ, ಗುರಿ, ಸೇವೆಯ ವಿವರಗಳು, ಸಾರ್ವಜನಿಕರಿಗೆ ಒದಗಿಸಲಾಗಿರುವ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

ಆ. ಎರಡನೆಯದಾಗಿ ಸಾರ್ವಜನಿಕರಿಗೆ ನೀಡಿರುವ ಭರವಸೆ, ಸಾರ್ವಜನಿಕರ ಕುಂದುಕೊರತೆ ನಿವಾರಣೆ ಕ್ರಮ, ಸಾರ್ವಜನಿಕರೊಡನೆ ಸ್ಪಂದಿಸುವುದು ಇತ್ಯಾದಿ

ಇ. ಮೂರನೆಯದಾಗಿ ಅನುಬಂಧಗಳ ವಿವರಗಳು.

ನಾಗರೀಕರ ಸನ್ನದಿನ ಪ್ರತಿಗಳು ಸಂಸ್ಥೆಯ ಮೂರು ಮುಖ್ಯ ಬಸ್ ನಿಲ್ದಾಣಗಳಲ್ಲಿ ಹಾಗೂ ಕೇಂದ್ರ ಕಛೇರಿಯಲ್ಲಿ ರೂ.25/- ರ ಬೆಲೆಯಲ್ಲಿ ಲಭ್ಯವಿರುತ್ತದೆ.

**ಅಧ್ಯಾಯಗಳು:**


1. ಸಂಸ್ಥೆಯ ಪರಿಚಯ ಹಾಗೂ ಧ್ಯೇಯೋದ್ದೇಶಗಳು
2. ಸಂಕ್ಷಿಪ್ತ ವಿವರ
3. ಸೇವೆಯ ವಿವರಗಳು
4. ಸಂಸ್ಥೆಯ ವಾಹನ ಬಲ
5. ಪ್ರಯಾಣಿಕರ ಸೌಲಭ್ಯಗಳು
6. ಸಾರ್ವಜನಿಕ ಪಾಸು ವ್ಯವಸ್ಥೆ
7. ಸಾಮಾಜಿಕ ಹೊಣೆಗಾರಿಕೆಗಳು & ಪ್ರಯಾಣಿಕ ಸ್ನೇಹಿ ಕಾರ್ಯಕ್ರಮಗಳು
8. ಹೊಸ ಯೋಜನೆಗಳು
9. ಪ್ರಯಾಣಿಕರ ಸ್ನೇಹಿ ಆವಿಷ್ಕಾರಗಳು
10. ಇತರೆ
11. ಸಂಸ್ಥೆಯ ಘೋಷಣೆ ಮತ್ತು ಹೊಣೆಗಾರಿಕೆ
12. ಉತ್ತಮ ಸೇವೆ ಒದಗಿಸಲು ನಮ್ಮೊಂದಿಗೆ ಸಹಕರಿಸುವ ವಿಧಾನ

**ಅನುಬಂಧಗಳು**

ಅ. ಸಂಸ್ಥೆಯ ಅಧಿಕಾರಿಗಳು ಮತ್ತು ಹುದ್ದೆಯ ಪದಕ್ರಮ
ಆ. ವಿಚಾರಣೆ/ದೂರು ಸಲ್ಲಿಸುವ ಅಧಿಕಾರಿಗಳ ದೂರವಾಣಿ ಮಾಹಿತಿ
ಇ. ವಿದ್ಯಾರ್ಥಿ ರಿಯಾಯ್ತಿ ಪಾಸುಗಳ ಅರ್ಜಿ ನಮೂನೆ
ಈ. ಮಾಸಿಕ ಪಾಸು ಪಡೆಯಲು ಅರ್ಜಿ ನಮೂನೆ
ಉ. ಸಾಂಧರ್ಬಿಕ ಒಪ್ಪಂದದ ಸೇವೆ ಪಡೆಯಲು ಅರ್ಜಿ ನಮೂನೆ
ಊ.ಹೊಸ ಮಾರ್ಗಗಳ ಬೇಡಿಕೆ ಬಗ್ಗೆ ಅರ್ಜಿ ನಮೂನೆ
ಋ. ಸಂಸ್ಥೆಯ ಸೇವೆಗಳ ಬಗ್ಗೆ ಮಾಹಿತಿ ಪಡೆಯಲು ಅಧಿಕಾರಿಗಳ ವಿವರ
ಎ. ಆಚರಣೆಯಲ್ಲಿರುವ ಮಾರ್ಗಗಳ ಬಗ್ಗೆ ದೂರು ನೀಡುವ ನಮೂನೆ
ಏ. ದೂರು & ಸಲಹೆಗಳಿಗಾಗಿ ಅರ್ಜಿ ನಮೂನೆ
ಐ. ಗುತ್ತಿಗೆ ಸೇವೆಗಳ ಮಾಹಿತಿ
ಒ. ಸಾಂದರ್ಬಿಕ ಒಪ್ಪಂದ ಸೇವೆಗಳು

## 1. ಮುನ್ನುಡಿ ಹಾಗೂ ಸಂಸ್ಥೆಯ ಧ್ಯೇಯೋದ್ದೇಶಗಳು:

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು** (ಈ ಹಿಂದಿನ ಬೆಂಗಳೂರು ನಗರ ಸಾರಿಗೆ ಸಂಸ್ಥೆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೇರ್ಪಟ್ಟು ದಿನಾಂಕ 15/08/1997 ರಂದು ಸ್ವತಂತ್ರ ಸಂಸ್ಥೆಯಾಗಿ ಅಸ್ಥಿತ್ವಕ್ಕೆ ಬಂದಿರುತ್ತದೆ. ಸಂಸ್ಥೆಯ ಆಚರಣಾ ವ್ಯಾಪ್ತಿಯು ಮೊದಲು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 20 ಕಿ.ಮೀ ವರೆಗೆ ಇದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25 ಕಿ.ಮೀ ವರೆಗೆ ಇದರ ವ್ಯಾಪ್ತಿಯು ವಿಸ್ತರಿಸಿದೆ.

ಬೆಂಗಳೂರು ನಗರ ಮತ್ತು ಹೊರವಲಯ ಪ್ರದೇಶದ ಪ್ರಯಾಣಿಕರಿಗೆ ದಕ್ಷ, ಸಮರ್ಥ, ಸುರಕ್ಷಿತ, ವಿಶ್ವಾಸಾರ್ಹ ಮತ್ತು ನಿಗದಿತ ಸಾರಿಗೆ ಸೇವೆಯನ್ನು ಒದಗಿಸುವುದು ಸಂಸ್ಥೆಯ ಧ್ಯೇಯವಾಗಿರುತ್ತದೆ.

## 2. ಸಂಕ್ಷಿಪ್ತ ವಿವರ :

ಪ್ರಸ್ತುತ ಸಂಸ್ಥೆಯಲ್ಲಿ 5517 ವಿವಿಧ ರೀತಿಯ ವಾಹನಗಳಿಮದ ಪ್ರತಿದಿನ 5344 ಅನುಸೂಚಿಗಳೊಂದಿಗೆ 2307 ಮಾರ್ಗಗಳಲ್ಲಿ 69,097 ಸುತ್ತುವಳಿಗಳನ್ನು ಆಚರಣೆ ಮಾಡಿ 12.69 ಲಕ್ಷ ಕಿ.ಮೀಗಳನ್ನು ಕ್ರಮಿಸುವ ಮೂಲಕ ಸುಮಾರು 37 ಲಕ್ಷ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

ಈ ಸಧ್ಯ ಸಂಸ್ಥೆಯಲ್ಲಿ 27,629 ಕ್ಕೂ ಅಧಿಕ ಸಿಬ್ಬಂದಿ ವರ್ಗವಿದ್ದು, ಸಂಚಾರ, ತಾಂತ್ರಿಕ, ಆಡಳಿತ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿದ್ದು, 30 ಘಟಕಗಳನ್ನು ಬೆಂಗಳೂರಿನ ಶಾಂತಿನಗರದ ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿನ ಪ್ರಧಾನ ಕಛೇರಿಯಿಂದ ನಿಯಂತ್ರಿಸಲಾಗುತ್ತಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಸೇರಿರುವ ಕೇಂದ್ರೀಯ ಕಾರ್ಯಗಾರ ಕೆ.ಹೆಚ್. ರಸ್ತೆಯಲ್ಲಿ ಇದ್ದು ಹಾಗೂ ಮತ್ತೊಂದು ಶಾಖೆಯನ್ನು ಕೆ.ಆರ್.ಪುರಂನಲ್ಲಿ ತೆರೆದಿರುತ್ತದೆ. ಸಂಸ್ಥೆಯು 4 ಪ್ರಮುಖ ಬಸ್ ನಿಲ್ದಾಣಗಳು ಹಾಗೂ 39 ಸಣ್ಣ ಬಸ್ ನಿಲ್ದಾಣಗಳನ್ನು ಹೊಂದಿರುತ್ತದೆ. 4 ಪ್ರಮುಖ ಬಸ್ ನಿಲ್ದಾಣಗಳು ಈ ಕೆಳಕಂಡಂತಿರುತ್ತವೆ.

1. ಕೆಂಪೆಗೌಡ ಬಸ್ ನಿಲ್ದಾಣ,
2. ಕೃ.ರಾ.ಮಾರುಕಟ್ಟೆ ಬಸ್ ನಿಲ್ದಾಣ
3. ಶಿವಾಜಿನಗರ ಬಸ್ ನಿಲ್ದಾಣ,
4. ಶಾಂತಿನಗರ ಬಸ್ ನಿಲ್ದಾಣ

## 3. ಸೇವೆಯ ವಿವರಗಳು:

ಬೆಂಮಸಾಸಂಸ್ಥೆಯು ಎಲ್ಲಾ ವರ್ಗದ ಜನತೆಗೆ ಅನುಕೂಲವಾಗುವಂತೆ ವಿವಿಧ ರೀತಿಯ ಸೇವೆಗಳನ್ನು ಒದಗಿಸುತ್ತಿದೆ. ಅವುಗಳನ್ನು ಕೆಳಕಂಡಂತೆ ವಿಂಗಡಿಸಲಾಗಿದೆ.

**ಅ. ವಲಯವಾರು ವಿಂಗಡಣೆ**

**ಆ. ಗುಣಮಟ್ಟವಾರು ವಿಂಗಡಣೆ**

**ಇ. ಮಾದರಿವಾರು ವಿಂಗಡಣೆ**

**ಅ. ವಲಯವಾರು ವಿಂಗಡಣೆ:**

- **ನಗರ ಸೇವೆ(ಕಪ್ಪು ಹಲಗೆ)** :ಈ ಸೇವೆಗಳು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಚರಣೆಯಾಗುತ್ತವೆ.
- **ನಗರ ಹೊರವಲಯ (ಕೆಂಪು ಹಲಗೆ)** : ಈ ಸೇವೆಗಳು ನಗರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗಡಿಯಿಂದ 25 ಕಿ,ಮೀ ವರೆಗೆ ಆಚರಣೆಯಾಗುತ್ತವೆ.

- **<u>ಗ್ರಾಮಾಂತರ ಸೇವೆಗಳು :</u>** ಸಾರ್ವಜನಿಕ ಬೇಡಿಕೆಯ ಮೇರೆಗೆ ನಿಗದಿತ ಸಂಖ್ಯೆಯಲ್ಲಿ ಪ್ರಮುಖ ಮಾರ್ಗಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಿಂದ 25 ಕಿ.ಮೀ ನಂತರವೂ ಕ.ರಾ.ರ.ಸಾ.ಸಂಸ್ಥೆಯ ದರಗಳಲ್ಲಿ ಆಚರಣೆ ಮಾಡಲಾಗುತ್ತಿದೆ. ನಗರ ಹಾಗೂ ಹೊರವಲಯ ಸೇವೆಗಳು ಸಂಸ್ಥೆಯ ಒಟ್ಟು ಆಚರಣಾ ಸಂಖ್ಯೆಯಲ್ಲಿ ಶೇ.99 ರಷ್ಟಿದ್ದು, ಗ್ರಾಮಾಂತರ ಸೇವೆಗಳ ಸಂಖ್ಯೆ ತೀರ ಕಡಿಮೆಯಿರುತ್ತದೆ.

**ಆ. ಗುಣಮಟ್ಟವಾರು ವಿಂಗಡಣೆ :**

- **ಸಾಮಾನ್ಯ ಸೇವೆಗಳು** : ಈ ಸೇವೆಯನ್ನು ಸಾಮಾನ್ಯ ಹಾಗೂ ಪರಿಸರವಾಹಿನಿ ವಾಹನಗಳ ಮೂಲಕ ಒದಗಿಸಲಾಗುತ್ತಿದೆ. ಈ ಸೇವೆಗಳು ಸಾಮಾನ್ಯ ಪ್ರಯಾಣಿಕರ ಬಸ್ ದರದೊಂದಿಗೆ ಆಚರಣೆಯಾಗುತ್ತಿವೆ. ಪ್ರಸ್ತುತ ನಗರ ಹಾಗೂ ಹೊರವಲಯಗಳಲ್ಲಿ ಸಾಮಾನ್ಯ ಬಸ್ ಸೇವೆಯನ್ನು ಒದಗಿಸಲಾಗುತ್ತಿದೆ.

- **ಪುಷ್ಪಕ್ ಸೇವೆಗಳು** : ವಿಶೇಷ ಮಾದರಿಯ ಬಸ್ಸುಗಳಾದ ಅಂದರೆ ವಿಶೇಷ ಆಸನ ವ್ಯವಸ್ಥೆಯ, ಕಾಲು ಇಡಲು ಹೆಚ್ಚಿನ ಸ್ಥಳಾವಕಾಶದ ಹಾಗೂ ತಲೆಗೆ ಆರಾಮದಾಯಕವಾಗಿರಲು ಹೆಚ್ಚಿನ ಎತ್ತರದ ಆಸನದ ವ್ಯವಸ್ಥೆಯನ್ನೊಳಗೊಂಡ ವಿವಿಧ ಬಣ್ಣದ (ಬಿಸ್ಕತ್ ಬಣ್ಣ) ಬಸ್ಸುಗಳ ಮೂಲಕ ಈ ಸೇವೆಯನ್ನು ಒದಗಿಸಲಾಗಿತ್ತಿದೆ. ಈ ಬಸ್ಸುಗಳು ಸಾಮಾನ್ಯ ಬಸ್ಸುಗಳ ದರಗಳಿಗಿಂತ ಸ್ವಲ್ಪ ಹೆಚ್ಚಿನ ದರದಲ್ಲಿ ಆಚರಣೆಯಾಗುತ್ತವೆ. ಪ್ರಸ್ತುತ 298 ಪುಷ್ಪಕ್ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ. ಈ ಸೇವೆಗಳು ಸಾಂದರ್ಭಿಕ ಗುತ್ತಿಗೆ ಮತ್ತು ಸಾಂದರ್ಭಿಕ ಒಪ್ಪಂದದ ಸೇವೆಗಳಿಗೆ ಹೆಚ್ಚು ಜನಪ್ರಿಯವಾಗಿವೆ.

- **ಮಿನಿ ಹವಾನಿಯಂತ್ರಿತ ಸೇವೆಗಳು :** ಸಂಸ್ಥೆಯು ಮಿನಿ ಹವಾನಿಯಂತ್ರಿತ ಬಸ್ಸುಗಳನ್ನು (ಸ್ವರಾಜ್ ಮಜ್ದಾ) ಕೆಂಪೆಗೌಡ ಬಸ್ ನಿಲ್ದಾಣದಿಂದ ನಗರದ ವಿವಿಧ ಬಡಾವಣೆಗಳಿಗೆ ಆಚರಣೆ ಮಾಡಲಾಗುತ್ತಿದೆ. ಹೆಸರೆ ತಿಳಿಸುವಂತೆ ಈ ಬಸ್ಸುಗಳು ಹವಾನಿಯಂತ್ರಿತ ವ್ಯವಸ್ಥೆಯ ಹೆಚ್ಚಿನ ಆರಾಮದಾಯಕವಾಗಿದ್ದು, ವಾಯು ಮಾಲಿನ್ಯದಿಂದ ಮುಕ್ತವಾಗಿವೆ. ಈ ಬಸ್ಸುಗಳನ್ನು ಪುಷ್ಪಕ್ ದರಗಳಿಗಿಂತೆ ಹೆಚ್ಚಿನ ದರದಲ್ಲಿ ಆಚರಣೆ ಮಾಡಲಾಗುತ್ತಿದೆ.

- **ವಜ್ರ(ವೋಲ್ವೋ) ಸೇವೆಗಳು** : ಇತ್ತೀಚಿನ ದಿನಗಳಲ್ಲಿ ಬೆಂಮಸಾಸಂಸ್ಥೆಯು ಹೊಸದಾಗಿ ಸೇರಿಸಿರುವ ಸೇವೆ ಇದಾಗಿರುತ್ತದೆ. ಇವು ಹವಾನಿಯಂತ್ರಿತ, ಯೂರೋ–2, ನಗರ ಮಾದರಿಯ ವೋಲ್ವೋ ಬಸ್ಸುಗಳಿಂದ ಈ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ. ಇವು ಹೆಚ್ಚಿನ ಆರಾಮದಾಯವಾಗಿದ್ದು, ವಾಯು ಹಾಗೂ ಶಬ್ದಮಾಲಿನ್ಯ ರಹಿತವಾಗಿರುವುದರಿಂದ ಬೆಂಮಸಾಸಂಸ್ಥೆಯ ಎಲ್ಲಾ ಸೇವೆಗಳಲ್ಲಿ ಅತ್ಯುತ್ತಮವಾಗಿವೆ. ಇವುಗಳಲ್ಲಿ ಅಂಗವಿಕಲ ಪ್ರಯಾಣಿಕರು ಹತ್ತಲು ಇಳಿಯಲು ಅನುಕೂಲವಾಗುವಂತೆ ಕೆಳಹಂತಸ್ತಿನ ಮೆಟ್ಟಿಲು ವ್ಯವಸ್ಥೆಯ ತಾಂತ್ರಿಕತೆಯನ್ನು ಅಳವಡಿಸಲಾಗಿರುತ್ತದೆ. ಈ ಬಸ್ಸುಗಳನ್ನು ಪುಷ್ಪಕ್ ಬಸ್ ದರಗಳಿಗಿಂತ ಹೆಚ್ಚಿನ ದರದಲ್ಲಿ ಆಚರಣೆ ಮಾಡಲಾಗುತ್ತಿದೆ.

- **ಬಿಐಎಎಲ್ ಮೀಸಲು ಸೇವೆ :**

**ವಾಯುವಜ್ರ ಬಸ್ ಸೇವೆ:** ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ನಗರದ ನಡುವೆ ಆರಾಮದಾಯಕವಾದ ಸಾರಿಗೆ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ ಮೇ 2008 ರಿಂದ ವಾಯುವಜ್ರ ಬಸ್ ಸೇವೆಯನ್ನು ಪರಿಚಯಿಸಲಾಗಿರುತ್ತದೆ. ಈ ಸೇವೆಗಳನ್ನು ಹವಾನಿಯಂತ್ರಿತ ಹಾಗೂ ಪ್ರಯಾಣಿಕರಿಗೆ ಲಗೇಜು ಇರಿಸಲು ಉತ್ತಮ ವ್ಯವಸ್ಥೆ ಕಲ್ಪಿಸಿರುವ ವೋಲ್ವೋ ಬಸ್ಸುಗಳಿಂದ

ಆಚರಣೆ ಮಾಡಲಾಗುತ್ತಿದೆ. ಈ ಸೇವೆಯು ವೈಯಕ್ತಿಕ ಸಾರಿಗೆಯಿಂದ ಸಾರ್ವಜನಿಕ ಸಾರಿಗೆ ಸೇವೆಯತ್ತ ಪ್ರಯಾಣಿಕರನ್ನು ಸೆಳೆಯಲು ಹಾಗೂ ನಗರ ಸಾರಿಗೆ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರಲು ಕೈಗೊಂಡ ಆವಿಷ್ಕಾರವಾಗಿರುತ್ತದೆ. ಪ್ರಸ್ತುತ 10 ಮಾರ್ಗಗಳಲ್ಲಿ 58 ಅನುಸೂಚಿಗಳಿಂದ ಈ ಸೇವೆಯಲ್ಲಿ ಆಚರಣೆ ಮಾಡಲಾಗುತ್ತಿರುತ್ತದೆ.

**ಅ.** ***ಟ್ರಂಪೆಟ್ ಸೇವೆ :*** ರಾಷ್ಟ್ರೀಯ ಹೆದ್ದಾರಿ–7 ಕ್ಕೆ ಹೊಂದಿಕೊಂಡಂತಿರುವ ಟ್ರಂಪೆಟ್ ಬಸ್ ನಿಲ್ದಾಣ ಹಾಗೂ ವಿಮಾನನಿಲ್ದಾಣದ ನಡುವೆ ಸಾರಿಗೆ ಸಂಪರ್ಕ ಕಲ್ಪಿಸಲು ಈ ಸೇವೆಯನ್ನು ಪರಿಚಯಿಸಲಾಗಿರುತ್ತದೆ. ಸಾಮಾನ್ಯ ಹಾಗೂ ಸುವರ್ಣ ಬಸ್ಸುಗಳೊಂದಿಗೆ ಆಚರಣೆಯಲ್ಲಿವೆ.

**ಇ. ಮಾದರಿವಾರು ವಿಂಗಡಣೆ** :

- **ಮೆಟ್ರೋ/ಗ್ರಿಡ್ :** ವಿಶೇಷ ಮಾದರಿಯ ಬಸ್ಸುಗಳನ್ನು 25 ಮಾರ್ಗಗಳಲ್ಲಿ, ನಗರ ಮಧ್ಯಭಾಗದಲ್ಲಿ ಸಂಚರಿಸದೇ ನಗರದ ವಿರುದ್ಧ ದಿಕ್ಕುಗಳಲ್ಲಿರುವ ಪ್ರಮುಖ ಸ್ಥಳಗಳಿಗೆ ನೇರ ಸಂಪರ್ಕ ಕಲ್ಪಿಸಲು ಆಚರಣೆ ಮಾಡಲಾಗುತ್ತಿದೆ.

- **ಪಾಸು ವಿಶೇಷ** : ವಿಶೇಷ ಮಾದರಿಯ ಈ ಸೇವೆಗಳನ್ನು ಪಾಸುದಾರರ ಅನುಕೂಲಕ್ಕಾಗಿ ಆಚರಣೆ ಮಾಡಲಾಗುತ್ತಿದೆ. ಈ ಬಸ್ಸುಗಳಿಗೆ ಹತ್ತುವ ಪ್ರಯಾಣಿಕರಿಗೆ ದಿನದ ಪಾಸುಗಳನ್ನು ಮಾತ್ರ ಮಾರಾಟ ಮಾಡಲಾಗುತ್ತಿದ್ದು, ಟಿಕೆಟುಗಳನ್ನು ವಿತರಿಸಲಾಗುವುದಿಲ್ಲ.

- **ಮಹಿಳಾ ವಿಶೇಷ :** ಮಹಿಳಾ ಪ್ರಯಾಣಿಕರು ಮತ್ತು 12 ವರ್ಷದೊಳಗಿನ ಎಲ್ಲಾ ಮಕ್ಕಳ ಅನುಕೂಲಕ್ಕಾಗಿ ವಿಶೇಷ ಮಾದರಿಯ ಮಹಿಳಾ ವಿಶೇಷ ಬಸ್ಸುಗಳನ್ನು ಕೆಂಪೇಗೌಡ ಬಸ್ ನಿಲ್ದಾಣದಿಂದ ಪ್ರಮುಖ ಮಾರ್ಗಗಳಲ್ಲಿ ಆಚರಣೆ ಮಾಡಲಾಗುತ್ತಿದೆ

- **ಆಸ್ಪತ್ರೆ ವಿಶೇಷ:** ಪ್ರಮುಖ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸಲು ಮಿನಿ ಬಸ್ಸುಗಳನ್ನು **"ಆಸ್ಪತ್ರೆ ವಿಶೇಷ"** ಮಾದರಿಯ ಬಸ್ಸುಗಳಾಗಿ ಪರಿವರ್ತಿಸಿ ಆಚರಣೆ ಮಾಡಲಾಗುತ್ತಿದೆ.

- **ಬೆಂಗಳೂರು ರೌಂಡ್ಸ್:** ವಿಶೇಷ ಮಾದರಿಯಲ್ಲಿ ವಿನ್ಯಾಸಗೊಳಿಸಲಾದ 2 ಬಸ್ಸುಗಳನ್ನು, ಒಂದು ಹವಾನಿಯಂತ್ರಿತ ಮತ್ತೆರಡು ಹವಾನಿಯಂತ್ರಿತವಲ್ಲದ ಬಸ್ಸುಗಳನ್ನು ಬೆಂಗಳೂರು ನಗರವನ್ನು ವೀಕ್ಷಿಸಲಿಚ್ಚಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಆಚರಣೆ ಮಾಡಲಾಗುತ್ತಿದೆ.

- **ನಗರ ಕೇಂದ್ರದಲ್ಲಿನ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ಸಲುವಾಗಿ ಜಾರಿಗೆ ತರಲಾಗಿರುವ ವಿನೂತನ ಯೋಜನೆಗಳು (ಕೇಂದ್ರ ಸಾರಿಗೆ ಮತ್ತು ಬಿಗ್–10 ಸೇವೆಗಳು)**
- **ಕೇಂದ್ರ ಸಾರಿಗೆ:**
    - ದ್ವಿಚಕ್ರವಾಹನ, ಕಾರು ಮುಂತಾದ ವೈಯಕ್ತಿಕ ಸಾರಿಗೆ ಬಳಕೆದಾರರನ್ನು ಸಾರ್ವಜನಿಕ ಸಾರಿಗೆಯನ್ನು ಆಕರ್ಷಿಸಿ, ನಗರ ಕೇಂದ್ರ ಭಾಗದಲ್ಲಿನ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ಸಲುವಾಗಿ ಬೆಂ.ಮ.ಸಾ.ಸಂಸ್ಥೆಯು **ಕೇಂದ್ರ ಸಾರಿಗೆ ಮತ್ತು ಬಿಗ್–10** ಎಂಬ 02 ಹೊಸ ಸೇವೆಗಳನ್ನು ಆಚರಣೆಗೆ ತಂದಿರುತ್ತದೆ.
    - ಕೇಂದ್ರ ಸಾರಿಗೆಯು ನಗರದ ಹೃದಯ ಭಾಗದಲ್ಲಿರುವ ಪ್ರಮುಖ ಸ್ಥಳಗಳನ್ನು ಸಂಪರ್ಕಿಸುವ ಮೂಲಕ ನಗರದ ಸುತ್ತಳತೆಯುದ್ದಕ್ಕೂ ರಚಿಸಲಾದ ಮಾರ್ಗದಲ್ಲಿ

ನೇರ ಹಾಗೂ ವಿರುದ್ಧ ದಿಕ್ಕಿನಲ್ಲಿ ಆಚರಣೆಯಾಗುತ್ತಿದೆ. ವಿಶೇಷವಾಗಿ ವಿನ್ಯಾಸಗೊಳಿಸಲಾದ ಬ್ರಾಂಡೆಡ್ ವೋಲ್ವೋ ಬಸ್ಸುಗಳನ್ನು ಬೆಳಿಗ್ಗೆ 0730 ರಿಂದ ರಾತ್ರಿ 1030 ಗಂಟೆಯ ನಡುವ ಈ ಸೇವೆಗಳ ಆಚರಣೆಗಾಗಿ ನಿಯೋಜಿಸಲಾಗಿದೆ. ಸಮಾಜದ ಎಲ್ಲಾ ವರ್ಗದ ಜನತೆಗೂ ಕೈಗೆಟುಕುವಂತೆ ಈ ಸೇವೆಗಳ ಪ್ರಯಾಣದರವನ್ನು ನಿಗದಿಗೊಳಿಸಲಾಗಿದೆ.

- **ಬಿಗ್–10 ಸೇವೆಗಳು:**
  - ನಗರದ 10 ಪ್ರಮುಖ ರಸ್ತೆಗಳು ಹಾಗೂ ಸುತ್ತಮುತ್ತಲಿನ ಹೊರವಲಯಗಳಿಂದ ಸುವರ್ಣ ಸೇವೆಗಳಿಗೆ ಬಿಗ್–10 ಎಂದು ಹೆಸರಿಸಲಾಗಿದೆ. ಈ ರಸ್ತೆಗಳೆಂದರೆ ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಸರ್ಜಾಪುರ ರಸ್ತೆ, ಕನಕಪುರ ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ, ನೆಲಮಂಗಲ ರಸ್ತೆ, ಬಳ್ಳಾರಿ ರಸ್ತೆ, ಹೊಸಕೋಟೆ ರಸ್ತೆ ಇತ್ಯಾದಿ. ಈ ಸೇವೆಗಳನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾದ ಬ್ರಾಂಡೆಡ್ ಬಸ್ಸುಗಳ ಮೂಲಕ ಆಚರಣೆ ಮಾಡಲಾಗುತ್ತಿದ್ದು, ಸುವರ್ಣ ಸೇವೆಗಳ ದರಗಳನ್ನು ನಿಗದಿಪಡಿಸಲಾಗಿದೆ. ಈ ಸೇವೆಗಳು ಮೇಲ್ಕಾಣಿಸಿದ 10 ರಸ್ತೆಗಳ ಪೈಕಿ ಪ್ರತಿಯೊಂದು ರಸ್ತೆಯ ಪ್ರಮುಖ ಸ್ಥಳದಿಂದ ಆಚರಣೆಯಾಗುತ್ತಿದ್ದು, ಇವುಗಳು ಕೇಂದ್ರ ಸಾರಿಗೆ ಸೇವೆಗಳಿಗೆ ಸಂಪರ್ಕ ಕಲ್ಪಿಸುತ್ತಿವೆ. ಇದರಿಂದಾಗಿ ಹೊರವಲಯಗಳು ಮತ್ತು ನಗರ ಕೇಂದ್ರಕ್ಕೆ ನೇರ ಸಂಪರ್ಕ ಕಲ್ಪಿಸಿದಂತಾಗಿದೆ.
  - ಈ ಸೇವೆಗಳಿಗೆ ಪ್ರಯಾಣಿಕರಿಂದ ಸಂಪೂರ್ಣ ಪ್ರೋತ್ಸಾಹ ದೊರೆತಲ್ಲಿ ನಗರ ಕೇಂದ್ರದಲ್ಲಿನ ಕಾರು ಮತ್ತು ದ್ವಿಚಕ್ರ ವಾಹನಗಳ ಸಂಖ್ಯೆಯಲ್ಲಿ ಗಣನೀಯ ಇಳಿಮುಖವನ್ನು ಕಾಣಬಹುದಾಗಿದೆ.
- **ಅಟಲ್ ಸಾರಿಗೆ:**

  ಸಮಾಜದ ಅಲ್ಪಸಂಖ್ಯಾತರು ಹಾಗೂ ಆರ್ಥಿಕವಾಗಿ ಹಿಂದುಗಳಿದ ವರ್ಗಗಳ ಜನರು ವಾಸಿಸುವ ಪ್ರದೇಶಗಳಿಂದ ಅತ್ಯಂತ ಕಡಿಮೆ ದರಗಳಲ್ಲಿ ನೇರ ಸಾರಿಗೆ ಸೌಲಭ್ಯ ಒದಗಿಸುವ ಸಲುವಾಗಿ ಸರ್ಕಾರದ ಮಹದಾಶಯದಂತೆ ಅಟಲ್ ಸಾರಿಗೆ ಎಂಬ ಹೊಸ ಸೇವೆಯನ್ನು ಜಾರಿಗೆ ತರಲಾಗಿದೆ.

- **ಇತರ ಸೇವೆಗಳು:** ಇವುಗಳನ್ನು ಪ್ರಮುಖ ಸ್ಥಳಗಳಲ್ಲಿ ನಿರ್ದಿಷ್ಟ ಪ್ರಯಾಣಿಕರ ಅಗತ್ಯಕ್ಕನುಗುಣವಾಗಿ ಆಚರಣೆ ಮಾಡಲಾಗುತ್ತಿದೆ, ಅವುಗಳೆಂದರೆ ಹೊರವರ್ತುಲ ರಸ್ತೆ ಸೇವೆ, ಒತ್ತಡ ಸಮಯದ ಸೇವೆ, ಫೀಡರ್ ಸೇವೆ, ರಾತ್ರಿ ಸೇವೆ ಇತ್ಯಾದಿ

  i) **ವರ್ತುಲ ರಸ್ತೆ ಸೇವೆ:** ಈ ಸೇವೆಗಳನ್ನು ಪ್ರತ್ಯೇಕವಾಗಿ ಹೊರವರ್ತುಲ ರಸ್ತೆ ಸೇವೆಗಳಾಗಿ ಆಚರಣೆ ಮಾಡಲಾಗುತ್ತಿದೆ. ಇವುಗಳ ಆಚರಣೆಯಿಂದ ನಗರ ಮಧ್ಯಭಾಗದಲ್ಲಿ ಒತ್ತಡವನ್ನು ಕಡಿಮೆ ಮಾಡಲು ಸಹಾಯಕವಾಗಿವೆ. ಇನ್ನೂ ಹೆಚ್ಚಿನ ಅನುಸೂಚಿಗಳನ್ನು ಸೇರ್ಪಡಿಸಲು ಯೋಜಿಸಲಾಗಿದೆ.

  ii) **ಟ್ರಂಕ್ ಸೇವೆ :** ನಗರದ ವಿವಿಧ ಮಾರ್ಗಗಳಿಗೆ ಪ್ರಮುಖ ಬಸ್ ನಿಲ್ದಾಣಗಳ ಮೂಲಕ ಸಂಚರಿಸಿ ಸಂಪರ್ಕ ಕಲ್ಪಿಸಲು ಈ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ.

  iii) **ಒತ್ತಡ ಸಮಯದ ಸೇವೆ:** ಬೆಳಿಗ್ಗೆ ಮತ್ತು ಸಂಜೆ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಈ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ. ಪ್ರಮುಖವಾಗಿ ಆಡಳಿತಾತ್ಮಕ ಕಛೇರಿಗಳಾದ ವಿಧಾನಸೌಧ ಮತ್ತು ಸುತ್ತಮುತ್ತಲಿನ ಕಛೇರಿಗಳ ಸಿಬ್ಬಂದಿಗಳಿಗೆ ಅನುಕೂಲವಾಗುವಂತೆ ಇವುಗಳನ್ನು ಆಚರಣೆ ಮಾಡಲಾಗುತ್ತಿದೆ. ಈ ಸೇವೆಗಳನ್ನು ಕಛೇರಿ ನೌಕರರ ಸಮಯಕ್ಕನುಗುಣವಾಗಿ ಆಚರಣೆ ಮಾಡಲಾಗುತ್ತಿದೆ.

iv) **ರಾತ್ರಿ ಸೇವೆಗಳು** : ನಗರಕ್ಕೆ ದೂರದ ಊರುಗಳಿಂದ ತಡವಾಗಿ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ಹಾಗೂ ಬಹುಮುಂಜಾನೆ ಹೊರಪ್ರದೇಶಗಳಿಗೆ ಪ್ರಯಾಣಿಸುವವರ ಅನುಕೂಲಕ್ಕಾಗಿ ರಾತ್ರಿ/ತಡರಾತ್ರಿ ಸೇವೆಗಳನ್ನು ಸಂಸ್ಥೆಯು ಆಚರಣೆ ಮಾಡುತ್ತಿದೆ. ಈ ಸೇವೆಗಳನ್ನು ಕೆಂಪೆಗೌಡ ಬಸ್ ನಿಲ್ದಾಣದಿಂದ ನಗರ ಹಾಗೂ ಸುತ್ತಮುತ್ತಲಿನ ಪ್ರಮುಖ ಬಡಾವಣೆಗಳನ್ನು ಒಳಗೊಂಡಂತೆ ಆಚರಣೆ ಮಾಡಲಾಗುತ್ತಿದೆ. ರಾತ್ರಿ 2400 ಗಂಟೆವರೆಗೆ ಹಾಗೂ ಬೆಳಗ್ಗೆ 0400 ಗಂಟೆಯಿಂದ ಈ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ. ಈ ಸೇವೆಯಲ್ಲಿ ಬಸ್ ಪ್ರಯಾಣ ದರವು ಸಾಮಾನ್ಯ ದರಕ್ಕಿಂತ ಅರ್ಧಪಟ್ಟು ಹೆಚ್ಚಿರುತ್ತದೆ.

v) **ಫೀಡರ್ ಸೇವೆಗಳು:** ಒಂದು ಬಡಾವಣೆಯಿಂದ ಮತ್ತೊಂದು ಬಡಾವಣೆಗೆ ನೇರ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಹಾಗೂ ಹೆಚ್ಚಿನ ಜನ ಸಾಂದ್ರತೆ ಇರುವ ಪ್ರದೇಶದಲ್ಲಿ ಅಗತ್ಯಕ್ಕನುಗುಣವಾಗಿ ನಗರದ ಆಯ್ದ ವಿವಿಧ ಕಡೆಗಳಲ್ಲಿ ಈ ರೀತಿಯ ಸಾರಿಗೆ ಕಾರ್ಯಾಚರಣೆಯನ್ನು ಮಾಡಲಾಗುತ್ತಿದ್ದು, ಪ್ರಸ್ತುತ 40 ಈ ರೀತಿಯ ಅನುಸೂಚಿಗಳು ಕಾರ್ಯಾಚರಣೆಯಲ್ಲಿರುತ್ತವೆ.

- **ವಿಶೇಷ ಸೇವೆಗಳು** : ಬೆಂಮಸಾಸಂಸ್ಥೆಯು ತನ್ನ ಸಾಮಾನ್ಯ ಆಚರಣೆ ಅಲ್ಲದೆ ಕಛೇರಿ, ಕಾರ್ಖಾನೆ ಮತ್ತು ವಿದ್ಯಾ ಸಂಸ್ಥೆಗಳ ಕೋರಿಕೆ ಮೇರೆಗೆ ಗುತ್ತಿಗೆ ಆಧಾರದ ಸೇವೆಗಳನ್ನು ಒದಗಿಸುತ್ತಿದೆ ಹಾಗೂ ವಿಶೇಷ ಸಮಾರಂಭಗಳಿಗೆ ಮದುವೆ, ಸಾಮಾಜಿಕ ಕಾರ್ಯ, ರಾಜಕೀಯ ಸಭೆ ಅಥವಾ ಧಾರ್ಮಿಕ ಕಾರ್ಯಗಳ ಸಂಬಂಧ ಬರುವ ಬೇಡಿಕೆಗಳಿಗೂ ಸಹ ಒಪ್ಪಂದದ ಮೇರೆಗೆ ಸೇವೆಗಳನ್ನು ಒದಗಿಸಲಾಗುತ್ತಿದೆ. ಇವುಗಳ ವಿವರಗಳೆಂದರೆ :

ಅ. **ಗುತ್ತಿಗೆ ಆಧಾರದ ಸೇವೆ:** ಬೆಂಮಸಾಸಂಸ್ಥೆಯು ಕೈಗಾರಿಕೆಗಳಿಗೆ, ವಿದ್ಯಾ ಸಂಸ್ಥೆಗಳಿಗೆ ಹಾಗೂ ಇತರೆ ಸಾರ್ವಜನಿಕ/ಖಾಸಗಿ ಸಂಸ್ಥೆಗಳಿಗೆ ಕೋರಿಕೆಯಂತೆ ಚಾರ್ಟರ್ಡ್ ಕಾಂಟ್ರಾಕ್ಟ್ ಸೇವೆಗಳ ಆಧಾರದ ಮೇಲೆ ಸಾಮಾನ್ಯ/ಪುಷ್ಪಕ್/ಜನಪ್ರಿಯವಾಹಿನಿ/ಪುಷ್ಪಕ್‌ಪ್ಲಸ್ ಬಸ್ಸುಗಳನ್ನು ಒದಗಿಸಲಾಗಿದೆ. ಈ ಸೇವೆಗಳ ದರ, ಒದಗಿಸಬೇಕಾದ ಕಿ.ಮೀ ಇತ್ಯಾದಿಗಳ ಬಗ್ಗೆ ಪರಸ್ಪರ ಒಪ್ಪಂದದ ಮೂಲಕ ಒದಗಿಸಲಾಗುವುದು. ಅತ್ಯಾಧುನಿಕವಾದ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳೂ ಸಹ ಈ ಸೇವೆಗಳನ್ನು ಸಂಸ್ಥೆಯಿಂದ ಪಡೆಯುತ್ತಿವೆ ಎಂದರೆ ಇದು ಸಂಸ್ಥೆಯು ನೀಡುತ್ತಿರುವ ಸಂಸ್ಥೆಯ ಗುಣಮಟ್ಟ ಹಾಗೂ ನಂಬಿಕಾರ್ಹವಾದ ಸೇವೆಗೆ ಹಿಡಿದ ಕನ್ನಡಿಯಾಗಿದೆ.

ಬೆಂಮಸಾಸಂಸ್ಥೆಯು ಗುತ್ತಿಗೆ ಸೇವೆಗಳಿಗೆ ಸ್ಪರ್ಧಾತ್ಮಕವಾದ ದರಗಳನ್ನು ನಿಗದಿ ಮಾಡಿ ಬಳಕೆದಾರರಿಗೆ ಒದಗಿಸುತ್ತಿದೆ. ವಿವಿಧ ಸೇವೆಗಳಿಗೆ ನಿಗದಿ ಮಾಡಿರುವ ಗುತ್ತಿಗೆ ಸೇವೆ ದರಗಳ ವಿವರಗಳನ್ನು ಅನುಬಂಧ 'ಐ' ರಲ್ಲಿ ತೋರಿಸಲಾಗಿದೆ.

**ಆ. ಒಪ್ಪಂದ ಆಧಾರದ ಸೇವೆಗಳು:** ಸಾರ್ವಜನಿಕ ಪ್ರಯಾಣಿಕರ ಕೋರಿಕೆಯಂತೆ ಬೆಂಮಸಾಸಂಸ್ಥೆಯು ಮದುವೆ, ಪ್ರವಾಸ ಮತ್ತು ಇತರ ಸಮಾರಂಭಗಳಿಗೆ ಅಗತ್ಯಕ್ಕನುಗುಣವಾಗಿ ಬಸ್ಸುಗಳನ್ನು ಒಪ್ಪಂದದ ಮೇಲೆ ಒದಗಿಸುತ್ತಿದೆ. ಈ ಸೇವೆಗಳನ್ನು ಗಂಟೆಗಳ ಆಧಾರದ ಮೇಲೆ ಹಾಗೂ ದಿನದ ಆಧಾರದ ಮೇಲೆ ಒದಗಿಸಲಾಗುತ್ತಿದೆ. ಈ ಸೇವೆಗಳ ದರಗಳನ್ನು ಅನುಬಂಧ "ಓ" ರಲ್ಲಿ ಮಂಡಿಸಲಾಗಿದೆ. ಆಸಕ್ತರು ಅನುಬಂಧ 'ಅ' ರಲ್ಲಿ ನೀಡಿರುವ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಘಟಕ ವ್ಯವಸ್ಥಾಪಕರು ಮತ್ತು ನಿಲ್ದಾಣಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

## 4. ಬೆಂಮಸಾಸಂಸ್ಥೆಯ ವಾಹನ ಬಲ:

ಬೆಂಮಸಾಸಂಸ್ಥೆಯು ಸಾರ್ವಜನಿಕ ಬೇಡಿಕೆಗನುಗುಣವಾಗಿ ವಿವಿಧ ಮಾದರಿಯಲ್ಲಿ, ವಿವಿಧ ಆಸನ ವ್ಯವಸ್ಥೆಯ ವಾಹನ ಬಲವನ್ನು ಹೊಂದಿದೆ. ಅವುಗಳೆಂದರೆ

೧. ಟಾಟಾ/ಲೈಲ್ಯಾಂಡ್ ಬಸ್ಸುಗಳಲ್ಲಿ 44 ಆಸನ ವ್ಯವಸ್ಥೆ, 10 ಪ್ರಯಾಣಿಕರು ನಿಂತು ಪ್ರಯಾಣಿಸುವ ಅವಕಾಶವಿರುತ್ತದೆ. **ಲೈಲ್ಯಾಂಡ್/ಟಾಟಾ/ಇಯಚರ್ ಪರಿಸರವಾಹಿನಿ ಬಸ್ಸುಗಳು:** (ಆಸನ ವ್ಯವಸ್ಥೆ 46/44/48): ಇವು ಪ್ರಯಾಣಿಕರ ಹಾಗೂ ಪರಿಸರ ಸ್ನೇಹಿ ಬಸ್ಸುಗಳಾಗಿದ್ದು, ಈ ಬಸ್ಸುಗಳ ಒಳ ವಿನ್ಯಾಸ ಸಾಕಷ್ಟು ವಿಶಾಲವಿದ್ದು ಸಾಮಾನ್ಯ ಬಸ್ಸುಗಳಿಗಿಂತ ಒಳ್ಳೆಯ ಗಾಳಿ ಬೆಳಕಿನ

ವ್ಯವಸ್ಥೆಯನ್ನು ಹೊಂದಿದ ವಾಹನಗಳಾಗಿರುತ್ತವೆ. ಈ ಬಸ್ಸುಗಳಿಗೆ ಯುರೋ–II ಮತ್ತು ಯೂರೋ–III ಮಾದರಿಯ ಇಂಜಿನ್‌ಗಳನ್ನು ಅಳವಡಿಸಬಹುದಾಗಿದೆ.

- **ವೆಸ್ಟಿಬುಲ್(ಜಂಟಿವಾಹನ) ಬಸ್ಸುಗಳು:** ಈ ಬಸ್ಸು ಆರ್ಟಿಕ್ಯುಲೇಟೆಡ್ ಬಸ್ಸುಗಳಾಗಿದ್ದು 65 ಕುಳಿತುಕೊಳ್ಳುವ ಆಸನಗಳು ಹಾಗೂ 20 ಮಂದಿ ನಿಂತು ಪ್ರಯಾಣಿಸಬಹುದಾದ ವ್ಯವಸ್ಥೆಯನ್ನು ಹೊಂದಿದೆ, ಈ ವಾಹನಗಳನ್ನು ಪ್ರಯಾಣಿಕರ ಸಂಚಾರ ಒತ್ತಡ ಹೆಚ್ಚಾಗಿರುವ ಮತ್ತು ರಸ್ತೆ ಸಾಕಷ್ಟು ವಿಸ್ತಾರವಾಗಿರುವ ಮಾರ್ಗಗಳಿಗೆ ಆಚರಣೆ ಮಾಡಲು ಯೋಗ್ಯವಾಗಿರುತ್ತವೆ. ಬೆಂಗಳೂರು ನಗರದಲ್ಲಿ ಈ ಬಸ್ಸುಗಳನ್ನು ಪ್ರತ್ಯೇಕವಾಗಿ ರಿಂಗ್ ಮಾರ್ಗಗಳಲ್ಲಿ ಮತ್ತು ನಗರದ ಮುಖ್ಯ ರಸ್ತೆಗಳಲ್ಲಿ ಆಚರಣೆ ಮಾಡಲಾಗುತ್ತಿದೆ.
- **ಟಾಟಾ/ಲೈಲ್ಯಾಂಡ್ ಪುಷ್ಪಕ್/ಜನಪ್ರಿಯ ವಾಹಿನಿ/ಪುಷ್ಪಕ್ ಪ್ಲಸ್ ಬಸ್ಸುಗಳು:** ಈ ಬಸ್ಸುಗಳನ್ನು ಪ್ರಯಾಣಿಕರಿಗೆ ಹೆಚ್ಚಿನ ಆರಾಮದಾಯಕ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಈ ಬಸ್ಸುಗಳಲ್ಲಿ ಸಾಕಷ್ಟು ವಿಶಾಲ ಸ್ಥಳವುಳ್ಳ ಆಸನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಬಸ್ಸುಗಳ ಪೈಕಿ ತೀರಾ ಇತ್ತೀಚಿನ ಮಾದರಿಯ ಪುಷ್ಪಕ್ ಪ್ಲಸ್ ವಾಹನಗಳನ್ನು ಸಹ ಆಚರಣೆಗೆ ತರಲಾಗಿದೆ. ಈ ಬಸ್ಸುಗಳನ್ನು ಪ್ರಯಾಣಿಕರ ಸಂಚಾರ ಒತ್ತಡ ಹೆಚ್ಚಿರುವ ಮಾರ್ಗಗಳಲ್ಲಿ ಆಚರಣೆ ಮಾಡಲಾಗುತ್ತಿದೆ. ಈ ಬಸ್ಸುಗಳನ್ನು ಸಾಂದರ್ಭಿಕ ಒಪ್ಪಂದದ ಮೇಲೆ ಪಡೆಯಲು ಅನುಕೂಲಕರವಾಗಿವೆ.
- **ಸ್ವರಾಜ್ ಮಜ್ದಾ ಮಿನಿ ಬಸ್ಸುಗಳು:** ಸಾಮಾನ್ಯ ಬಸ್ಸುಗಳು ಓಡಾಡಲು ಸೂಕ್ತವಲ್ಲದ, ಕಿರಿದಾದ ಹಾಗೂ ಕಡಿಮೆ ಪ್ರಯಾಣಿಕರ ಒತ್ತಡವಿರುವ ಮಾರ್ಗಗಳಲ್ಲಿ ಕಡಿಮೆ ಆಚರಣಾ ವೆಚ್ಚದಲ್ಲಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲು ಈ ಬಸ್ಸುಗಳನ್ನು ಆಚರಣೆಗೆ ತರಲಾಗಿದೆ.
- **ವೋಲ್ವೋ ಬಸ್ಸುಗಳು** : ಬೆಂಮಸಾಸಂಸ್ಥೆಯು ನವನವೀನ, ಸಂಪೂರ್ಣ ಹವಾನಿಯಂತ್ರಿತವಾದ, ನಗರ ಮಾದರಿಯ ವಿಶ್ವವಿಖ್ಯಾತ ವೋಲ್ವೋ ಬಸ್ಸುಗಳ ಆಚರಣೆಯು ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯಲ್ಲಿ ಹೊಸ ಶಕೆಯನ್ನು ಪ್ರಾರಂಭಿಸಿದೆ. ಈ ಬಸ್ಸುಗಳು ಬೆಂಮಸಾಸಂಸ್ಥೆಗೆ ಕೀರ್ತಿ ಪತಾಕೆಗೆ ಮತ್ತೊಂದು ಗರಿಯಾಗಿರುತ್ತದೆ.

**5. ಬಸ್ ನಿಲ್ದಾಣಗಳಲ್ಲಿನ ಪ್ರಯಾಣಿಕರ ಮೂಲಭೂತ ಸೌಕರ್ಯಗಳು :**

ಸಂಸ್ಥೆಯು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಸ್ನೇಹಿ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ. ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳೆಂದರೆ

***ಅ. ಕೆಂಪೆಗೌಡ ಬಸ್ ನಿಲ್ದಾಣ***

***ಆ. ಕೃ.ರಾ.ಮಾರುಕಟ್ಟೆ ಬಸ್ ನಿಲ್ದಾಣ***

***ಇ. ಶಿವಾಜಿನಗರ ಬಸ್ ನಿಲ್ದಾಣ***

***ಈ. ಶಾಂತಿನಗರ ಬಸ್ ನಿಲ್ದಾಣ***

ಅಲ್ಲದೆ, ನಗರದ ವಿವಿಧ ಭಾಗಗಳಲ್ಲಿ ಹರಡಿಕೊಂಡಿರುವ 39 ಸಣ್ಣ ಬಸ್ ನಿಲ್ದಾಣಗಳಿದ್ದು, ಪ್ರತಿಯೊಂದು ಬಸ್ ನಿಲ್ದಾಣದಲ್ಲಿಯೂ ಆ ಬಸ್ ನಿಲ್ದಾಣದ ವಿಶಾಲತೆ, ಸಾರ್ವಜನಿಕ ಬೇಡಿಕೆ, ಲಭ್ಯವಿರುವ ಸಂಚಾರದ ಒತ್ತಡ ಮತ್ತು ಆ ನಿಲ್ದಾಣವಿರುವ ಪ್ರದೇಶದ ಆಧಾರದ ಮೇಲೆ ಮೂಲಭೂತ ಸೌಕರ್ಯ ಹಾಗೂ ಅಗತ್ಯ ಪ್ರಯಾಣಿಕರ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಸೌಲಭ್ಯಗಳಲ್ಲಿ ಪ್ರಯಾಣಿಕಸ್ನೇಹಿ ಮಾರ್ಗಸೂಚಿ/ಮಾಹಿತಿ ಫಲಕಗಳು, ಶುದ್ಧತೆ ಮತ್ತು ಶುಚಿಯಾಗಿ ನಿರ್ವಹಣೆ ಮಾಡಿದ ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ, ವೃದ್ಧರು ಮತ್ತು ವಿಕಲಚೇತನರು ಸೇರಿದಂತೆ ಪ್ರಯಾಣಿಕರು ಕುಳಿತುಕೊಳ್ಳಲು ಆಸನ ವ್ಯವಸ್ಥೆ, ಬಿಸಿಲು ಮತ್ತು ಮಳೆಯಿಂದ ರಕ್ಷಣೆ, ಸಾರ್ವಜನಿಕ ವಿಚಾರಣೆ/ದೂರು ಸ್ವೀಕೃತಿ, ಸೇವಾ ಮಾಹಿತಿ, ವೇಳಾಪಟ್ಟಿ ಪ್ರದರ್ಶನ, ಧ್ವನಿವರ್ಧಕ ವ್ಯವಸ್ಥೆ, ಉಪಹಾರ ಗೃಹ, ಸಾರ್ವಜನಿಕ ದೂರವಾಣಿ, ಔಷಧಿ ಮತ್ತು ಲೇಖನ ಸಾಮಗ್ರಿ ಮಳಿಗೆ, ವಿಕಲ ಚೇತನರಿಗೆ ಸಹಕಾರಿಯಾಗುವಂತೆ ವ್ಹೀಲ್ ಚೇರ್ ಮತ್ತು ಇತರೆ ಸಂಬಂಧಿತ ಸೌಲಭ್ಯಗಳನ್ನು ಒದಗಿಸಲಾಗಿದೆ.

**39 ಸಣ್ಣ ಬಸ್ ನಿಲ್ದಾಣಗಳು ಯಾವುವೆಂದರೆ:** ಆಸ್ಟಿನ್ ಟೌನ್, ಬಿಟಿಎಂ ಲೇಔಟ್, ಬನಶಂಕರಿ, ಬಸವೇಶ್ವರ ನಗರ, ಚಂದ್ರಾ ಲೇಔಟ್, ಚೆನ್ನಮ್ಮನ ಕೆರೆ ಅಚ್ಚುಕಟ್ಟು, ದೊಮ್ಮಲೂರು, ಎಲೆಕ್ಟ್ರಾನಿಕ್ ಸಿಟಿ, ಜಯನಗರ ಬಸ್ ನಿಲ್ದಾಣ, ಜೀವವಭೀಮಾನಗರ, ಕಾಡುಗೋಡಿ, ಕಾವಲ್ ಬೈರಸಂದ್ರ, ಕಲ್ಯಾಣನಗರ, ಕುಮಾರಸ್ವಾಮಿ ಲೇಔಟ್, ಕೆಂಗೇರಿ, ಮಲ್ಲೇಶ್ವರಂ 18ನೇ ಕ್ರಾಸ್, ಮುನೇಶ್ವರ ಬ್ಲಾಕ್, ನಂದಿನಿ ಲೇಔಟ್, ಪಿಳ್ಳಣ್ಣ ಗಾರ್ಡನ್, ವಿಜಯನಗರ ಪೂರ್ವ, ವಿವೇಕ ನಗರ, ಯಲಹಂಕ ಉಪನಗರ, ಯಲಹಂಕ ಉಪನಗರ 5ನೇ ಹಂತ, ಯಶವಂತಪುರ, ಅಂಜನಾಪುರ, ಹೆಸರಘಟ್ಟ, ಕೋರಮಂಗಲ, ವಿಶ್ವೇಶ್ವರಯ್ಯ ಲೇಔಟ್, ಬಿಡದಿ, ಬನಶಂಕರಿ 3ನೇ ಹಂತ 3ನೇ ಘಟ್ಟ, ಚಿಕ್ಕಮಾರನಹಳ್ಳಿ, ಕೆ.ಆರ್.ಪುರಂ, ಕೆಂಪೇಗೌಡ ಬಸ್ ನಿಲ್ದಾಣ, ಕೆಂಗೇರಿ ಉಪನಗರ (ಶಿರ್ಕೆ ಅಪಾರ್ಟ್‌ಮೆಂಟ್ ಎದುರು), ನಾಗರಭಾವಿ 9ನೇ ಬ್ಲಾಕ್, ರಾಜರಾಜೇಶ್ವರಿನಗರ, ಶಾಂತಿನಗರ, ಶಿವಾಜಿನಗರ, ವಿದ್ಯಾರಣ್ಯಪುರ.

೬. **ಸಾರ್ವಜನಿಕ ಪಾಸು ವ್ಯವಸ್ಥೆ** : ಬೆಂಮಸಾಸಂಸ್ಥೆಯು ಪಾಸು ವ್ಯವಸ್ಥೆಯು ಸಾರ್ವಜನಿಕ ಪ್ರಯಾಣಿಕರಿಂದ ಮನ್ನಣೆ ಗಳಿಸಿದೆ. ವಿವಿಧ ವರ್ಗದವರ ಅಗತ್ಯಕ್ಕನುಗುಣವಾಗಿ ವಿವಿಧ ರೀತಿಯ ಪಾಸುಗಳನ್ನು ಜಾರಿಗೆ ತಂದಿರುತ್ತದೆ. ಈ ಪಾಸು ವ್ಯವಸ್ಥೆಯು ಸಂಸ್ಥೆಯು ಪಾಸುದಾರರಿಗೆ ಒದಗಿಸಿರುವ ಸೇವೆಯಿಂದ ಜನಪ್ರಿಯಗೊಂಡಿದ್ದು, ಸಂಸ್ಥೆಯ ಶೇ.50 ರಷ್ಟು ಆದಾಯ ಪಾಸು ವಿತರಣೆಯಿಂದ ಬರುತ್ತಿದೆ, ಈ ಸಾರ್ವಜನಿಕ ಪಾಸುಗಳೆಂದರೆ ;

**ಅ**. ದಿನದ ಪಾಸು

**ಆ**. ವಾರದ ಪಾಸು

ಇ. ಸಾರ್ವಜನಿಕರ ಮಾಸಿಕ ಪಾಸು

ಈ. ಮಾಸಿಕ ಡೆಡಿಕೇಟೆಡ್ ಪಾಸು

ಈ ಪಾಸುಗಳ ದರ, ಒದಗಿಸಲಾಗಿರುವ ಸೌಲಭ್ಯ ಇತರ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ | ಪಾಸಿನ ಮಾದರಿ | ಒದಗಿಸಲಾಗಿರುವ ಸೌಲಭ್ಯ | ದರ |
|---|---|---|---|
| 1 | **ದಿನದ ಪಾಸು** (ಸೆಪ್ಟೆಂಬರ್ 2003 ರಿಂದ ಜಾರಿಗೆ ತರಲಾಗಿದೆ) | ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400) ಗಂಟೆಯವರೆಗೆ ಸಂಸ್ಥೆಯ ಹವಾನಿಯಂತ್ರಿತ, ವೋಲ್ವೋ ಮತ್ತು ಗ್ರಾಮಾಂತರ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸೇವೆಗಳಲ್ಲಿ ಎಷ್ಟು ಬಾರಿಯಾದರೂ ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ. | ರೂ.32/– |
| 2 | **ವಜ್ರ ಗೋಲ್ಡ್ ದಿನದ ಪಾಸು** (03.03.2009 ರಿಂದ ಜಾರಿಗೆ ತರಲಾಗಿದೆ) | ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400 ಗಂಟೆ) ವಾಯುವಜ್ರ ಸೇವೆಯನ್ನು ಹೊರತುಪಡಿಸಿ ಬೆಂ.ಮ.ಸಾ.ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ ಅನಿಯಮಿತವಾಗಿ ಪ್ರಯಾಣಿಸಲು ಅವಕಾಶವಿರುತ್ತದೆ. | ರೂ.75/– |
| 3 | **ವಾರದ ಪಾಸು** ( ಸೆಪ್ಟೆಂಬರ್ 2003 ರಿಂದ ಜಾರಿಗೆ ತರಲಾಗಿದೆ) | ಈ ಪಾಸುದಾರರು ಪಾಸು ಪಡೆದ ದಿನ ದಿಂದ 7 ದಿನಗಳವರೆಗೆ ಸಂಸ್ಥೆಯ ಹವಾನಿಯಂತ್ರಿತ, ವೋಲ್ವೋ ಮತ್ತು ಗ್ರಾಮಾಂತರ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸೇವೆಗಳಲ್ಲಿ ಎಷ್ಟು ಬಾರಿಯಾದರೂ | ರೂ. 180/– |

| | | | |
|---|---|---|---|
| | | ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ. | |
| 3 | **ಪ್ರಯಾಣಿಕರ ಮಾಸಿಕ ಪಾಸುಗಳು** :<br>(1998 ರಿಂದ ಜಾರಿಗೆ ತರಲಾಗಿದೆ )<br>ಅ) ನಗರ ವಲಯ ಪಾಸುಗಳು<br><br>ಆ) ಹೊರವಲಯ/ಪುಷ್ಪಕ್/ಸುವರ್ಣ ಪಾಸುಗಳು.<br><br>ಈ) ಗುರುತಿನ ಚೀಟಿ | ನಗರ ವ್ಯಾಪ್ತಿಯಲ್ಲಿ ಆಚರಣೆಯಾಗುವ ಎಲ್ಲಾ ಹವಾನಿಯಂತ್ರಣರಹಿತ ವಾಹನಗಳಲ್ಲಿ ಮಿತಿಯಿಲ್ಲದೇ ಪ್ರಯಾಣಿಸಬಹುದಾಗಿರುತ್ತದೆ.<br>ಎಲ್ಲಾ ನಗರ, ಹೊರವಲಯ ಮತ್ತು ಪುಷ್ಪಕ್ ಸೇವೆಗಳಲ್ಲಿ ಮಿತಿಯಿಲ್ಲದೇ ಪ್ರಯಾಣಿಸಬಹುದಾಗಿರುತ್ತದೆ.<br><br>3 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. | **ರೂ.450/–**<br><br>**ರೂ. 600/–**<br><br>**ರೂ.100/–** |
| | **ಉ) ವಜ್ರ ಗೋಲ್ಡ್ ಪಾಸು (ಮೇ–2008 ರಿಂದ ಜಾರಿಗೆ ತರಲಾಗಿದೆ)** | ವಾಯುವಜ್ರ ಹೊರತುಪಡಿಸಿ ಉಳಿದೆಲ್ಲಾ ಸೇವೆಗಳಲ್ಲಿ ಅನಿಯಮಿತ ಪ್ರಯಾಣಕ್ಕೆ ಅವಕಾಶವಿರುತ್ತದೆ. | ರೂ.1,550/- (ಒಂದು ತಿಂಗಳ ಪಾಸಿಗೆ)<br>ರೂ. 2800/– (ಒಂದೇ ಬಾರಿಗೆ ಎರಡು ತಿಂಗಳ ಪಾಸು ಕೊಂಡರೆ)<br>ರೂ. 3900/– (ಒಂದೇ ಬಾರಿಗೆ ಮೂರು ತಿಂಗಳ ಪಾಸು ಕೊಂಡರೆ) |
| | ಋ) **ಹೊರವಲಯ–ಕಂ–ಟ್ರಂಪೆಟ್ ಪಾಸು (ಜುಲೈ–2008 ರಿಂದ ಜಾರಿಗೆ ತರಲಾಗಿದೆ)** | ಎಲ್ಲಾ ನಗರ, ಹೊರವಲಯ ಮತ್ತು ವಿಮಾನ ನಿಲ್ದಾಣ ಟ್ರಂಪೆಟ್ ಸೇವೆಗಳಲ್ಲಿ ಅನಿಯಮಿತ ಪ್ರಯಾಣಕ್ಕೆ ಅವಕಾಶವಿದೆ. | **ರೂ.700/–** |
| | ಎ) **ವಾಯುವಜ್ರ ಗೋಲ್ಡ್ ಪಾಸು (ಜುಲೈ–2008 ರಿಂದ ಜಾರಿಗೆ ತರಲಾಗಿದೆ)** | ಬೆಂ.ಮ.ಸಾ.ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ ಅನಿಯಮಿತವಾಗಿ ಪ್ರಯಾಣಿಸಬಹುದಾಗಿದೆ. | Rs. 2,550/-<br>Rs. 2400/- (50 ಅಥವಾ ಅದಕ್ಕಿಂತ ಹೆಚ್ಚಿನ ಪಾಸು ಖರೀದಿಗೆ)<br>Rs. 2300/- (100 ಅಥವಾ ಅದಕ್ಕಿಂತ ಹೆಚ್ಚಿನ ಪಾಸು ಖರೀದಿಗೆ) |
| 5 | **ಹೊರವಲಯ–ಕಮ್–ಟ್ರಂಪೆಟ್ ಪಾಸು**<br>(ಜುಲೈ 2008 ರಿಂದ ಜಾರಿಗೆ ತರಲಾಗಿದೆ) | ಎಲ್ಲಾ ನಗರ, ಹೊರವಲಯ ಹಾಗೂ ಟ್ರಂಪೆಟ್ ಮತ್ತು ವಿಮಾನ ನಿಲ್ದಾಣದ ನಡುವೆ ಆಚರಣೆಯಾಗುವ ಟ್ರಂಪೆಟ್ ಸೇವೆಗಳಲ್ಲಿ ಒಂದು ದಿನಚರಿ ತಿಂಗಳ ಅವಧಿಗೆ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. | ರೂ.700/– |
| **8** | **ಮಾಸಿಕ ಡೆಡಿಕೇಟೆಡ್ ಪಾಸು** | ಈ ಪಾಸುಗಳನ್ನು ಕಛೇರಿ ಹಾಗೂ ಕಂಪನಿಗಳಿಗೆ ಹೋಗುವವರಿಗೆ ವಿತರಿಸುತ್ತಿದ್ದು, ಸದರಿಯವರುಗಳಿಗೆ ಅನುಕೂಲವಾಗುವಂತೆ ಡೆಡಿಕೇಟೆಡ್ ಟ್ರಿಪ್‌ಗಳನ್ನು ಆಚರಿಸಲಾಗುತ್ತಿದೆ ಹಾಗೂ ಈ ಪಾಸುದಾರರು ಇತರೆ ಸಮಯದಲ್ಲಿ ಹಾಗೂ ರಜಾ ದಿನಗಳಲ್ಲಿ ಸಂಸ್ಥೆಯ | |

| | | | |
|---|---|---|---|
| | | ವಾಹನಗಳಲ್ಲಿ ಯಾವುದೇ ನಿರ್ಬಂಧವಿಲ್ಲದೆ ಪ್ರಯಾಣಿಸಬಹುದಾಗಿರುತ್ತದೆ. | |

**7.ಸಾಮಾಜಿಕ ಹೊಣೆಗಾರಿಕೆಗಳು & ಪ್ರಯಾಣಿಕ ಸ್ನೇಹಿ ಕಾರ್ಯಕ್ರಮಗಳು** : ಬೆಂಮಸಾಸಂಸ್ಥೆಯು ಬೆಂಗಳೂರು ನಗರದಲ್ಲಿ ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಏಕೈಕ ಸಾರಿಗೆ ಸಂಸ್ಥೆಯಾಗಿದ್ದು, ಸಾರ್ವಜನಿಕ ಹೊಣೆಗಾರಿಕೆಯಾಗಿ ತನ್ನ ಪ್ರಯಾಣಿಕರ ಸುರಕ್ಷತೆಗಾಗಿ ಮತ್ತು ಸಮಾಜದ ಸೌಲಭ್ಯವಂಚಿತ ವರ್ಗದ ಜನತೆಯ ಅನುಕೂಲಕ್ಕಾಗಿ ಕೆಲವು ಯೋಜನೆಗಳನ್ನು ಕೈಗೊಂಡಿದ್ದು, ವಿವರಗಳು ಈ ಕೆಳಕಂಡಂತಿವೆ.

| | |
|---|---|
| 1. ಮಾಸಿಕ ಪಾಸುದಾರರಿಗೆ ಕಾಮನಬಿಲ್ಲು ಯೋಜನೆ | • **ಕಾಮನಬಿಲ್ಲು ಯೋಜನೆ :**<br>ಬೆಂಮಸಾಸಂಸ್ಥೆಯು ಮಾಸಿಕ ಪಾಸುದಾರರಿಗೆ ವಿಶೇಷ ಸೌಲಭ್ಯ ನೀಡುವ ಸಲುವಾಗಿ ಕಾಮನಬಿಲ್ಲು ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯು ಕೆಳಕಂಡ ಸೌಲಭ್ಯಗಳನ್ನು ಒಳಗೊಂಡಿದೆ.<br>1. **24 ತಾಸುಗಳ ಅಪಘಾತ ವಿಮಾ ರಕ್ಷೆ :** ಚಾಲ್ತಿಯಲ್ಲಿರುವ ಪಾಸು ಹೊಂದಿದವರು ಸಮಯದ ನಿರ್ಬಂಧವಿಲ್ಲದೆ/ಯಾವುದೇ ಸ್ಥಳದಲ್ಲಿ ಅಪಘಾತದಿಂದ ಮರಣ ಹೊಂದಿದ್ದಲ್ಲಿ ಅಥವಾ ಸಂಪೂರ್ಣ ಅಂಗಹೀನತೆ ಉಂಟಾದಲ್ಲಿ ರೂ.1.00 ಲಕ್ಷ ವಿಮಾ ಪರಿಹಾರ. ಈ ವಿಮಾ ಮೊತ್ತವನ್ನು ಜುಲೈ 2008 ರಿಂದ 2.00 ಕ್ಕೆ ಹೆಚ್ಚಿಸಲಾಗಿದೆ.<br>2. **ವೈದ್ಯಕೀಯ ವೆಚ್ಚ ಮರುಪಾವತಿ:** ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಘಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಟ ರೂ.20,000/- ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು. ಜುಲೈ 2008 ರಿಂದ ಈ ಮರುಪಾವತಿ ವೆಚ್ಚದ ಮೊತ್ತವನ್ನು ಗರಿಷ್ಟ ರೂ.30,000/- ವರೆಗೆ ಹೆಚ್ಚಿಸಲಾಗಿದೆ.<br>3. **50 ಮಂದಿ ಮಾಸಿಕ ಪಾಸುದಾರರಿಗೆ ಮೂರು ತಿಂಗಳ ಉಚಿತ ಪಾಸು:** ಪ್ರತಿ ತಿಂಗಳು ಲಾಟರಿ ಮುಖಾಂತರ ಆಯ್ಕೆ ಮಾಡಿದ 50 ಪಾಸುದಾರರಿಗೆ ಮುಂದಿನ ಮೂರು ತಿಂಗಳಿಗೆ ಉಚಿತ ಪಾಸು ನೀಡಲಾಗುವುದು. ಪ್ರತಿ ತಿಂಗಳು 25ನೇ ತಾರೀಖಿನಂದು ಲಾಟರ ಡ್ರಾ ನಡೆಸಲಾಗುವುದು.<br>4. **ಪಾರ್ಕಿಂಗ್ ಶುಲ್ಕದಲ್ಲಿ ಶೇಕಡಾ 50 ರಿಯಾಯಿತಿ :** ಬಿ.ಎಂ.ಟಿ.ಸಿ. ಯ ಪಾರ್ಕ್ ಅಂಡ್ ರೈಡ್ ಯೋಜನೆಯಡಿ ಮಾಸಿಕ ಪಾಸುದಾರರು ದ್ವಿಚಕ್ರ ವಾಹನ ನಿಲುಗಡೆ ಬಳಸಿದಲ್ಲಿ ಪಾರ್ಕಿಂಗ್ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು.<br>5. **ಮಾಸಿಕ ನಗದು ಬಹುಮಾನ:** ಪ್ರತಿ ತಿಂಗಳು 25 ನೇ ತಾರೀಖಿನಂದು ಲಾಟರಿ ಮುಖಾಂತರ ಆಯ್ಕೆಯಾದ 250 ಪಾಸುದಾರರಿಗೆ ರೂ.100 ನ್ನು ನಗದು ಬಹುಮಾನವಾಗಿ ನೀಡಲಾಗುವುದು.<br>6. **ಕೆ.ಎಸ್.ಟಿ.ಡಿ.ಸಿ. ಉಚಿತ ಪ್ರವಾಸದ ಪ್ಯಾಕೇಜ್‌ಗಳು** : ಪ್ರತಿ ತಿಂಗಳು 10 ಅದೃಷ್ಟಶಾಲಿ ಪಾಸುದಾರರಿಗೆ ಕೆ.ಎಸ್.ಟಿ.ಡಿ.ಸಿ. ಬಸ್ಸುಗಳಲ್ಲಿ ಉಚಿತ ಪ್ರವಾಸ ಅಥವಾ ರೂ.1500/- ಗಳನ್ನು ನಗದು ಬಹುಮಾನವನ್ನು ನೀಡಲಾಗುವುದು. |
| **2. *ಗೋಲ್ಡ್ ಮತ್ತು ವಾಯುವಜ್ರಗೋಲ್ಡ್*** | 1) ಚಾಲ್ತಿಯಲ್ಲಿರುವ ಪಾಸು ಹೊಂದಿರುವವರು ಯಾವುದೇ ವಿಧವಾನ ವಾಹನ ಅಪಘಾತದಲ್ಲಿ ಮೃತಪಟ್ಟಲ್ಲಿ ಅಥವಾ ಶಾಶ್ವತ ಅಂಗಹೀನತೆ ಉಂಟಾದಲ್ಲಿ |

| | |
|---|---|
| **ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ :** | ರೂ.10 ಲಕ್ಷಗಳವರೆಗಿನ ಸ್ವಯಂಚಾಲಿತ ಅಪಘಾತ ವಿಮಾ ಸೌಲಭ್ಯ.<br>2) ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಘಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಠ ರೂ.50,000/- ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು. |
| **3. ವಿದ್ಯಾರ್ಥಿ ರಿಯಾಯ್ತಿ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ :** | ವಿದ್ಯಾರ್ಥಿ ಪಾಸುದಾರರ ಅನುಕೂಲಕ್ಕಾಗಿ ಬೆಂಮಸಾಸಂಸ್ಥೆಯು ***"ದ್ವಿಪ್ರಯೋಜನ ಯೋಜನೆ"***ಯನ್ನು 2004 ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ. ಬೆಂಮಸಾಸಂಸ್ಥೆಯ ಚಾಲ್ತಿಯಲ್ಲಿರುವ ವಿದ್ಯಾರ್ಥಿ ಪಾಸನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ.<br>1. ಚಾಲ್ತಿಯಲ್ಲಿರುವ ವಿದ್ಯಾರ್ಥಿ ರಿಯಾಯ್ತಿ ಪಾಸನ್ನು ಹೊಂದಿರುವ ವಿದ್ಯಾರ್ಥಿಯು ವಾಹನ ಅಪಘಾತದಲ್ಲಿ ಮರಣದಹೊಂದಿದಲ್ಲಿ ಅಥವಾ ಸಂಪೂರ್ಣ ಅಂಗವಿಕಲರಾದಲ್ಲಿ ಅವರ ಪೋಷಕರಿಗೆ/ನಾಮನಿರ್ದೇಶನ ಹೊಂದಿದವರಿಗೆ ರೂ.50.000/- ವಿಮಾ ಪರಿಹಾರವನ್ನು ನೀಡಲಾಗುವುದು.<br>2. ಚಾಲ್ತಿಯಲ್ಲಿರುವ ವಿದ್ಯಾರ್ಥಿ ರಿಯಾಯ್ತಿ ಪಾಸುದಾರನು ಯಾವುದೇ ವಾಹನ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆದಿದ್ದಲ್ಲಿ ರೂ.10,000/-ದವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿ ಸೌಲಭ್ಯ. |
| 3. **ಚೀಟಿ/ದಿನದ ಪಾಸುಗಳನ್ನು ಹೊಂದಿರುವ ಪ್ರಯಾಣಿಕರಿಗೆ ದ್ವಿಪ್ರಯೋಜನ ಯೋಜನೆ (ದಿನಾಂಕ 1.12.2005ರಿಂದ):** | **೧. ಅಪಘಾತಪರಿಹಾರ/ಎಕ್ಸ್‌ಗ್ರೇಷಿಯಾ ಪ್ರಯೋಜನ:** ಚಾಲ್ತಿಯಲ್ಲಿರುವ ಸಂಸ್ಥೆಯ ಟಿಕೇಟು/ದಿನದ ಪಾಸನ್ನು ಹೊಂದಿ ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಮರಣಿಸಿದಲ್ಲಿ/ಸಂಪೂರ್ಣ ಅಂಗವಿಕಲರಾದಲ್ಲಿ ರೂ.1.00 ಲಕ್ಷ ಅಪಘಾತ ಪರಿಹಾರ/ಎಕ್ಸ್‌ಗ್ರೇಷಿಯಾ ಪ್ರಯೋಜನ ನೀಡಲಾಗುವುದು.<br>**೨. ವೈದ್ಯಕೀಯ ವೆಚ್ಚ ಮರುಪಾವತಿ:** ಚಾಲ್ತಿಯಲ್ಲಿರುವ ಸಂಸ್ಥೆಯ ಟಿಕೇಟು/ದಿನದ ಪಾಸನ್ನು ಹೊಂದಿ ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ ಅಂತಹವರಿಗೆ ರೂ.20,000/- ದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗುವುದು. |
| 4. **ಸಾಂದರ್ಭಿಕ ಒಪ್ಪಂದ /ಗುತ್ತಿಗೆ ಆಧಾರದ ಪ್ರಯಾಣಿಕರ ದ್ವಿಪ್ರಯೋಜನ ಯೋಜನೆ (ದಿ. 26/2/2006 ರಿಂದ)** | **1. ಅಪಘಾತಪರಿಹಾರ/ಎಕ್ಸ್‌ಗ್ರೇಷಿಯಾ ಪ್ರಯೋಜನ:** ಸಂಸ್ಥೆಯ ಸಾಂದರ್ಭಿಕ ಒಪ್ಪಂದ/ಗುತ್ತಿಗೆ ಆಧಾರದ ಮೇಲೆ ಆಚರಣೆಯಾಗುವ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಮರಣಿಸಿದಲ್ಲಿ/ಸಂಪೂರ್ಣ ಅಂಗವಿಕಲರಾದಲ್ಲಿ ರೂ.1.00 ಲಕ್ಷ ಅಪಘಾತ ಪರಿಹಾರ/ಎಕ್ಸ್‌ಗ್ರೇಷಿಯಾ ಪ್ರಯೋಜನ ನೀಡಲಾಗುವುದು.<br>**2.ವೈದ್ಯಕೀಯ ವೆಚ್ಚ ಮರುಪಾವತಿ:** ಸಂಸ್ಥೆಯ ಸಾಂದರ್ಭಿಕ ಒಪ್ಪಂದ/ಗುತ್ತಿಗೆ ಆಧಾರದ ಮೇಲೆ ಆಚರಣೆಯಾಗುವ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ ಅಂತಹವರಿಗೆ ರೂ.20,000/- ದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗುವುದು. |

- **ವಿಶೇಷ ಪಾಸುಗಳು:**

  ಸಾಮಾಜಿಕ ಹೊಣೆಗಾರಿಕೆಯಾಗಿ ಸಂಸ್ಥೆಯು ವಿಶೇಷ ಪಾಸುಗಳನ್ನು ವಿತರಿಸಿದ್ದು, ಭವಿಷ್ಯದಲ್ಲಿಯೂ ವಿತರಿಸಲಿದೆ. ಸಮಾಜದ ಕೆಲವರ್ಗದವರ ಹಿತದೃಷ್ಟಿಯಿಂದ ಈ ಪಾಸುಗಳನ್ನು ವಿತರಿಸುತ್ತಿದ್ದು, ಇದರಿಂದ ಸಂಸ್ಥೆಯು ಹೆಚ್ಚಿನ ಪ್ರಮಾಣದ ನಷ್ಟವನ್ನು ಅನುಭವಿಸುತ್ತಿದ್ದಾಗ್ಯೂ ಸಾಮಾಜಿಕ ಹೊಣೆಗಾರಿಕೆಯಾಗಿ ಈ ಪಾಸುಗಳನ್ನು ವಿತರಿಸುತ್ತಿದೆ.

  ವಿವರಗಳು ಈ ಕೆಳಕಂಡಂತಿವೆ.

| ವಿಶೇಷ ಪಾಸುಗಳು | ದರ | ಪಾಸು ಪಡೆಯಲು ಅರ್ಹತೆ |
|---|---|---|
| 1.**ವಿದ್ಯಾರ್ಥಿ ರಿಯಾಯ್ತಿ ಪಾಸು**<br>ಅ ಪ್ರಾಥಮಿಕ<br>ಆ.ಪ್ರೌಢಶಾಲೆ<br>i) ಬಾಲಕರು<br>ii) ಬಾಲಕಿಯರು<br>ಇ. ಕಾಲೇಜು (ಪಿಯುಸಿ, ಪದವಿ, ವೃತ್ತಿಪರ ಕಾಲೇಜು)<br>ಉ.ತಾಂತ್ರಿಕ & ವೈದ್ಯಕೀಯ ಕಾಲೇಜು<br>ಊ.ಸಂಜೆ ಕಾಲೇಜು<br>ಋ. **ಇಚ್ಛೆ ಬಂದಂತೆ ಪ್ರಯಾಣಿಸುವ ಪಾಸು**<br>1. ನಗರ<br>2. ಹೊರವಲಯ<br>1. | (10 ತಿಂಗಳಿಗೆ)<br>ಉಚಿತ<br><br>ರೂ. 700/-<br>ರೂ. 525/-<br>ರೂ. 1100/-<br>ರೂ. 1400/-<br>ರೂ. 1500/-<br><br>ರೂ.2100/-<br>ರೂ.2825/- | 1 ನೇ ತರಗತಿಯಿಂದ ಸ್ನಾತಕೋತರ ಪದವಿವರೆಗೆ ಸರ್ಕಾರದಿಂದ ಮಾನ್ಯತೆ ಪಡೆದ ಎಲ್ಲಾ ಶಾಲೆ/ಕಾಲೇಜು/ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ರಿಯಾಯ್ತಿ ದರದಲ್ಲಿ ಪಾಸು ವಿತರಿಸಲಾಗುತ್ತದೆ. |

**ಇಚ್ಛೆ ಬಂದಂತೆ ಪ್ರಯಾಣಿಸುವ ಪಾಸು**

| **ಪಾಸಿನ ವಿಧಗಳು** | **5 ತಿಂಗಳು** | **10 ತಿಂಗಳು** | **12 ತಿಂಗಳು** |
|---|---|---|---|
| ಕಪ್ಪು ಹಲಗೆ | ರೂ. 1,195/- | ರೂ. 2,320/- | ರೂ. 2,770/- |
| ಕೆಂಪು/ಪುಷ್ಪಕ್/ಸುವರ್ಣ | ರೂ. 1,570/- | ರೂ. 3,070/- | ರೂ. 3,670,/- |

ಈ ಪಾಸುಗಳ ಬೆಲೆಯು ರೂ.70/- ಹೊರತುಪಡಿಸಿದೆ. (ರೂ.50/- ಸಂಸ್ಕರಣಾ ಶುಲ್ಕ, ರೂ.10/- ವಿಮಾ ಶುಲ್ಕ, ರೂ.10/- ಮಾಹಿತಿ ತಂತ್ರಜ್ಞಾನ ಶುಲ್ಕ)

**ಇಚ್ಛೆ ಬಂದಂತೆ ಪ್ರಯಾಣಿಸುವ ಪಾಸು** : ಈ ಪಾಸನ್ನು ಪಡೆದ ವಿದ್ಯಾರ್ಥಿಗಳು ಸಂಬಂಧಿಸಿದ ಸೇವೆಗಳಲ್ಲಿ ಮಿತಿಯಿಲ್ಲದೆ ಪ್ರಯಾಣಿಸಬಹುದಾಗಿರುತ್ತದೆ, ಈ ಪಾಸುಗಳನ್ನು ವಿದ್ಯಾರ್ಥಿಗಳ ಶೈಕ್ಷಣಿಕೇತರ ಚಟುವಟಿಕೆಗಳಿಗೆ ಸಹಾಯವಾಗುವ ಹಿನ್ನೆಲೆಯಲ್ಲಿ ಪರಿಚಯಿಸಲಾಗಿರುತ್ತದೆ.

| | | |
|---|---|---|
| 2.**ಸುವರ್ಣ ಕರ್ನಾಟಕ ಹಿರಿಯ ನಾಗರೀಕರ ಮಾಸಿಕ ಪಾಸು**<br>ಅ. ನಗರ<br>ಆ. ನಗರ ಹೊರವಲಯ/ಪುಷ್ಪಕ್<br>ಈ. ಗುರುತಿನ ಚೀಟಿ (ಮೂರು ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ)<br>2. | ರೂ. 400/-<br>ರೂ. 540/-<br>ರೂ. 100/- | 62 ವರ್ಷ ಪೂರೈಸಿದ, ಮಕ್ಕಳ ಹಾಗೂ ಮಹಿಳಾ ಅಭಿವೃದ್ದಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಅದರಿಂದ ಅನುಮೋದನೆಗೊಂಡ ಸಂಘ ಸಂಸ್ಥೆಗಳ ವತಿಯಿಂದ ವಿತರಿಸಿರುವ ಹಿರಿಯ ನಾಗರೀಕರ ಗುರುತಿನ ಚೀಟಿಯನ್ನು ಹೊಂದಿರುವ ಹಿರಿಯ ನಾಗರೀಕರಿಗೆ ವಿತರಿಸಲಾಗುತ್ತದೆ. |
| 3. **ಅಂಧರಿಗೆ ಪಾಸುಗಳು:** | | ಸಮಾಜ ಕಲ್ಯಾಣ ಇಲಾಖೆಯಿಂದ ಅನುಮೋದನೆ |

| | | |
|---|---|---|
| (ಕರಾರಸಾಸಂಸ್ಥೆಯು ವಿತರಿಸುತ್ತಿದ್ದು ಬೆಂಮಸಾಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತದೆ) | ಉಚಿತ | ಪಡೆದು ತರುವ ಎಲ್ಲಾ ಅಂದರಿಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಿತರಣೆ ಮಾಡುವ ಉಚಿತ ಪಾಸುಗಳನ್ನು ಬೆಂಮಸಾಸಂಸ್ಥೆ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುವುದು. |
| **4.ಅಂಗವಿಕಲರಿಗೆ ಪಾಸುಗಳು** (ಕರಾರಸಾಸಂಸ್ಥೆಯು ವಿತರಿಸುತ್ತಿದ್ದು ಬೆಂಮಸಾಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತದೆ) | ರಿಯಾಯ್ತಿ | ಅಂಗವಿಕಲ ಪ್ರಯಾಣಿಕರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ವಿತರಣೆ ಮಾಡುವ ಪಾಸುಗಳನ್ನು ಬೆಂಮಸಾಸಂಸ್ಥೆ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುವುದು. |
| **5.ಸ್ವಾತಂತ್ರ್ಯ ಹೋರಾಟಗಾರರ ಪಾಸುಗಳು** (ಕರಾರಸಾಸಂಸ್ಥೆಯು ವಿತರಿಸುತ್ತಿದ್ದು ಬೆಂಮಸಾಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತದೆ) | ಉಚಿತ | ಸ್ವಾತಂತ್ರ್ಯ ಯೋಧರಿಗೆ ಕ.ರಾ.ರ.ಸಾ.ಸಂಸ್ಥೆಯಿಂದ ವಿತರಣೆ ಮಾಡುವ ಪಾಸುಗಳನ್ನು ಬೆಂಮಸಾಸಂಸ್ಥೆ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುವುದು. |
| 6.**ಪೋಲೀಸ್ ಡ್ಯೂಟಿ ಪಾಸು** | ರೂ.1200/– (6 ತಿಂಗಳಿಗೆ) | ದರ್ಜೆ–3 ಹಾಗೂ ದರ್ಜೆ–4 ರ ಪೋಲೀಸ್ ಸಿಬ್ಬಂದಿಗಳಿಗೆ ವಿತರಿಸಲಾಗುತ್ತದೆ. |
| 7. **ಪೋಲೀಸ್ ಡ್ಯೂಟಿ ಸಮನ್ಸ್ ಪಾಸು** | ರೂ. 1200/– (6 ತಿಂಗಳಿಗೆ) | ಸಮನ್ಸ್ ಮತ್ತು ನೋಟಿಸುಗಳನ್ನು ಜಾರಿಗೊಳಿಸಲು ನಿಗದಿತ ಸಂಖ್ಯೆಯಲ್ಲಿ ಪೋಲೀಸ್ ಇಲಾಖೆಗೆ ವಿತರಿಸಲಾಗುತ್ತದೆ. |
| 8. **ಅಗ್ನಿಶಾಮಕ ದಳದ ಸಿಬ್ಬಂದಿ ಪಾಸು** | ರೂ. 1200/– (6 ತಿಂಗಳಿಗೆ) | ಅಗ್ನಿಶಾಮಕ ದಳದ ಸಿಬ್ಬಂದಿಗಳಿಗೆ ವಿತರಿಸಲಾಗುತ್ತದೆ. |
| ಕ್ರ.ಸಂ.6,7 ಮತ್ತು 8 ರ ಪಾಸುಗಳಿಗೆ 6 ತಿಂಗಳಿಗೆ ರೂ.50/– ಸಂಸ್ಕರಣಾ ಶುಲ್ಕವನ್ನು ವಿಧಿಸಲಾಗುವುದು. | | |
| 9. **ಪತ್ರಕರ್ತರ ಪಾಸು** | ವಾರ್ಷಿಕ ರೂ. 120/– | ಮಾನ್ಯತೆ ಪಡೆದ ಪತ್ರಕರ್ತರಿಗೆ ನಗರ ಹಾಗೂ ಹೊರವಲಯ ಬಸ್ಸುಗಳಲ್ಲಿ ಪ್ರಯಾಣಿಸಲು ವಿತರಿಸಲಾಗುತ್ತಿದೆ. |

**8. ಹೊಸ ಯೋಜನೆಗಳು :**

**ಅ) ಸ್ಮಾರ್ಟ್ ಕಾರ್ಡ್ ಮಾದರಿಯ ವಿದ್ಯಾರ್ಥಿ ರಿಯಾಯ್ತಿ ಪಾಸು:** 2007–08 ನೇ ಸಾಲಿನಿಂದ ಬೆಂಮಸಾಸಂಸ್ಥೆಯು ವಿದ್ಯಾರ್ಥಿಪಾಸುದಾರರ ಅನುಕೂಲಕ್ಕಾಗಿ ಸ್ಮಾರ್ಟ್ ಕಾರ್ಡ್ ಮಾದರಿಯ ವಿದ್ಯಾರ್ಥಿ ಪಾಸುಗಳನ್ನು ವಿತರಿಸಿರುತ್ತದೆ. ವಿದ್ಯಾರ್ಥಿ ಪಾಸುದಾರರ ಸ್ವವಿವರಗಳನ್ನು ಗಣಕಯಂತ್ರದಲ್ಲಿ ಕ್ರೂಢೀಕರಿಸಲು ಹಾಗೂ ಅವರ ಪ್ರಯಾಣ ಸೌಲಭ್ಯವನ್ನು ಮತ್ತಷ್ಟೂ ಉತ್ತಮಗೊಳಿಸಲು ಅನುಕೂಲವಾಗುವಂತೆ ರೂಪಿಸುವ ಗುರಿ ಹೊಂದಿ ಸ್ಮಾರ್ಟ್ ಕಾರ್ಡನ್ನು ಪರಿಚಯಿಸಲಾಗಿರುತ್ತದೆ.

**ಆ)ಬೆಂಗಳೂರು ಕಾರ್ಡ್ :** ಮಾಸಿಕ ಪಾಸುದಾರರಿಗೆ ಗುರುತಿನ ಚೀಟಿಯನ್ನು ಸ್ಮಾರ್ಟ ಕಾರ್ಡ್ ಮಾದರಿಯಲ್ಲಿ ***ಬೆಂಗಳೂರು ಕಾರ್ಡ್*** ಎಂಬ ಹೆಸರಿನಿಂದ ಫೆಬ್ರವರಿ 2008 ರಿಂದ ಪರಿಚಯಿಸಿರುತ್ತದೆ.

ಹಲವು ಉಪಯೋಗಗಳ ಈ ಸ್ಮಾರ್ಟ್ ಕಾರ್ಡನ್ನು ಗುರುತಿನ ಚೀಟಿಯಾಗಿ ವಿತರಿಸಿರುವುದರಿಂದ ಇತರ ನಾಗರೀಕ ಸೌಲಭ್ಯ ಒದಗಿಸುವ ನಿಗಮಗಳಾದ ಬೆಂಗಳೂರು ಮೆಟ್ರೋ, ಕೆಪಿಟಿಸಿಎಲ್, ಬಿಡಬ್ಲೂಎಸ್ ಎಸ್‌ಬಿ ಇತರ ನಿಗಮಗಳಲ್ಲಿಯೂ ಹಣಪಾವತಿಗಾಗಿ ಭವಿಷ್ಯದ ದಿನಗಳಲ್ಲಿ ಇದನ್ನು ಉಪಯೋಗಿಸಬಹುದಾಗಿರುತ್ತದೆ. ಆದ್ದರಿಂದ ಈ ಕಾರ್ಡಿಗೆ ***ಬೆಂಗಳೂರು ಕಾರ್ಡ್*** ಎಂದು ನಾಮಧೇಯವಿಡಲಾಗಿರುತ್ತದೆ.

**ಟಿಟಿಎಂಸಿ (TTMC) ಯೋಜನೆ:**

ನಗರಗಳಲ್ಲಿ ನಾಗರೀಕ ಸೌಲಭ್ಯಗಳ ಅಭಿವೃದ್ದಿಗೆ ಭಾರತ ಸರ್ಕಾರವು ಜವಹರಲಾಲ್ ನೆಹರು ನ್ಯಾಷನಲ್ ಅರ್ಬನ್ ರಿನ್ಯುವಲ್ ಮಿಷನ್ (ಜೆಎನ್‌ಎನ್‌ಯುಆರ್‌ಎಂ) ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಬೆಂಗಳೂರು ಮತ್ತು ಮೈಸೂರು ಸೇರಿದಂತೆ ಕರ್ನಾಟಕದ 63 ನಗರಗಳು ಜೆಎನ್‌ಎನ್‌ಯುಆರ್‌ಎಂ ಯೋಜನೆಯಡಿಯಲ್ಲಿ ಅಭಿವೃದ್ದಿ ಕಾರ್ಯಕ್ಕೆ ಗುರುತಿಸಲ್ಪಟ್ಟಿವೆ.

ಈ ಸಂಬಂಧವಾಗಿ, ಬೆಂಮಸಾಸಂಸ್ಥೆಯು ದೂರದೃಷ್ಟಿ ಯೋಜನೆಯನ್ನು ಸಿದ್ದಪಡಿಸಿ, ಈ ಬಾಬ್ತಿಗೆ ರೂ.3000/– ಕೋಟಿಗಳನ್ನು ವ್ಯಯಿಸಲು ನಿರ್ಧರಿಸಿದೆ. ನಗರ ಸಾರಿಗೆಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ದಿಗೊಳಿಸಲು, ವಿಶ್ವ ದರ್ಜೆಯ ಹೈಟೆಕ್ ಬಸ್ಸುಗಳನ್ನು ಪರಿಚಯಿಸುವುದು, ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು, ಮಾನವ ಸಂಪನ್ಮೂಲ ಅಭಿವೃದ್ದಿಯ ಜೊತೆಗೆ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಜಾರಿಗೆ ತರುವುದು, ಈ ದೂರದೃಷ್ಟಿ ಯೋಜನೆಯಡಿಯಲ್ಲಿ ವ್ಯಯಿಸಲು ಯೋಜಿಸಿರುವ ಯೋಜನೆಗಳು ಈ ಕೆಳಕಂಡಂತಿವೆ.

- ಬಸ್ಸುಗಳನ್ನು ಹೆಚ್ಚಿಸುವುದು : ರೂ.1047.37 ಕೋಟಿಗಳು
- ಕಾಮಗಾರಿ ಅಭಿವೃದ್ಧಿಗಾಗಿ : ರೂ. 1619.37 ಕೋಟಿಗಳು
- ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ : ರೂ.150.00 ಕೋಟಿಗಳು
- ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗಾಗಿ : ರೂ. 183.26 ಕೋಟಿಗಳು

ಒಟ್ಟಾರೆ : ರೂ. 3000.00 ಕೊಟಿಗಳು

ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದಿಂದ ಶೇ.50 ರಷ್ಟು ಸಹಾಯಧನದೊಂದಿಗೆ ಸಮರ್ಥತೆ, ಆರ್ಥಿಕ ಉತ್ತಮತೆ, ಸರ್ವಸಮ್ಮತೆ ಮುಂತಾದ ಅಂಶಗಳಿಗೆ ಅವಕಾಶವುಳ್ಳಂತಹ ಕೇಂದ್ರ ಸರ್ಕಾರದ ಏಕೈಕ್ ಬೃಹತ್ ಯೋಜನೆಯಾದ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ ನವೀಕರಣ ಯೋಜನೆ (ಜೆಎನ್‌ಎನ್‌ಆರ್‌ಯುಎಂ)ಯಡಿಯಲ್ಲಿ ಈ ಯೋಜನೆಗಳನ್ನು ಭಾರತ ಹಾಗೂ ಕರ್ನಾಟಕ ಸರ್ಕಾರದ ಸಹಕಾರದೊಂದಿಗೆ ಕಾರ್ಯರೂಪಕ್ಕೆ ತರಲು ಬೆಂಮಸಾಸಂಸ್ಥೆಯು ಉದ್ದೇಶಿಸಿದೆ.

ಬೆಂಮಸಾಸಂಸ್ಥೆಯು 45 ಟಿಟಿಎಂಸಿ(Transport & Transit Management Centre) ಗಳನ್ನು ನಿರ್ಮಿಸಲು ಯೋಜಿಸಿರುತ್ತದೆ. ಟಿಟಿಎಂಸಿಗಳಲ್ಲಿ ಬಸ್ ಟರ್ಮಿನಸ್, ಬಸ್ಸುಗಳ ನಿರ್ವಹಣೆಗೆ ವ್ಯವಸ್ಥಿತ ಯೋಜನೆ, ಪ್ರಯಾಣಿಕರ ಮೂಲಭೂತಸೌಕರ್ಯಗಳ ಅಭಿವೃದ್ಧಿ, ಸಾಗಣೆ ವ್ಯವಸ್ಥೆ ಮತ್ತು ಪಾರ್ಕ್ ಅಂಡ್ ರೈಡ್ ವ್ಯವಸ್ಥೆ, ಬದಲಿ ಸಾರಿಗೆ ವ್ಯವಸ್ಥೆ ಅಂದರೆ ಖಾಸಗಿ ಸಾರಿಗೆ, ದ್ವಿಚಕ್ರವಾಹನ, ಕಾರುಗಳು, ಲೇಔಟ್ ರೌಂಡ್ಸ್, ಗ್ರಿಡ್ ಮಾರ್ಗಗಳ ಸೇವೆಗಳ ವ್ಯವಸ್ಥೆಯನ್ನು ಒದಗಿಸಲಾಗುತ್ತದೆ.

ಬೆಂಮಸಾಸಂಸ್ಥೆಯು ಜೆಎನ್‌ಎನ್‌ಯುಆರ್‌ಎಂ ಯೋಜನೆಯಡಿಯಲ್ಲಿ ಪ್ರಸ್ತಾವಿಸಿರುವ 45 ಟಿಟಿಎಂಸಿಗಳ ಪೈಕಿ 10 ಟಿಟಿಎಂಸಿಗಳನ್ನು ಗುರ್ತಿಸಿದ್ದು, ಅವುಗಳಲ್ಲಿ ಸಾರಿಗೆ ವ್ಯವಸ್ಥೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ವಿವರವಾದ ವರದಿಯನ್ನು (ಡಿಪಿಆರ್) ಸಿದ್ಧಪಡಿಸಿರುತ್ತದೆ.

ಟಿಟಿಎಂಸಿಗಳನ್ನು ನಿರ್ಮಿಸಲು ಉದ್ದೇಶಿಸಿರುವ 45 ಸ್ಥಳಗಳ ವಿವರಗಳು ಈ ಕೆಳಕಂಡಂತಿವೆ.

| | | | | | |
|---|---|---|---|---|---|
| 1 | ಜಯನಗರ | 2 | ವಿಜಯನಗರ | 3 | ಶಾಂತಿನಗರ |
| 4 | ಬನಶಂಕರಿ | 5 | ಕೋರಮಂಗಲ | 6 | ಬನ್ನೇರುಘಟ್ಟ |
| 7 | ಕೆಂಗೇರಿ | 8 | ವೈಟ್ ಫೀಲ್ಡ್ | 9 | ಯಶವಂತಪುರ |
| 10 | ದೊಮ್ಮಲೂರು | 11 | ಇಂದಿರಾನಗರ | 12 | ಕತ್ತರಿಗುಪ್ಪೆ |
| 13 | ಹೆಬ್ಬಾಳ | 14 | ಹೆಣ್ಣೂರು | 15 | ಹೆಚ್ ಎಸ್ ಆರ್ ಲೇಔಟ್ |
| 16 | ಎಲೆಕ್ಟ್ರಾನಿಕ್ ಸಿಟಿ | 17 | ನಾಗರಬಾವಿ | 18 | ಸೂರ್ಯಸಿಟಿ |
| 19 | ಪೂರ್ಣಪ್ರಜ್ಞಾ ಬಡಾವಣೆ | 20 | ಜಯನಗರ 4ನೇ ಘಟಕ | 21 | ಪೀಣ್ಯ |
| 22 | ಯಲಹಂಕ | 23 | ರಾಜರಾಜೇಶ್ವರಿನಗರ | 24 | ಹೊಸಕೋಟೆ |
| 25 | ಬಿಡದಿ | 26 | ವಡ್ಡರಹಳ್ಳಿ | 27 | ಅಂಜನಾಪುರ |

| | | | | | |
|---|---|---|---|---|---|
| 28 | ಅಂತರರಾಷ್ಟ್ರೀಯ ವಿಮಾನನಿಲ್ದಾಣ | 29 | ವೆಂಕಟಾಲ | 30 | ಬೈರತಿ |
| 31 | ಆವಲಹಳ್ಳಿ | 32 | ಚನ್ನಸಂದ್ರ | 33 | ಕೊಡತಿ |
| 34 | ದೊಡ್ಡತೋಗೂರು | 35 | ಗೊಲ್ಲಹಳ್ಳಿ | 36 | ಕಗ್ಗಲೀಪುರ |
| 37 | ಚಲ್ಲಘಟ್ಟ | 38 | ಸೂಲಿಕೆರೆ | 39 | ಮಾಚೋಹಳ್ಳಿ |
| 40 | ಮಾದಾಪುರ | 41 | ಬೈಯಪ್ಪನಹಳ್ಳಿ | 42 | ಹಾರೋಹಳ್ಳಿ |
| 43 | ಸೋಲದೇವನಹಳ್ಳಿ | 44 | ಕಂಬಿಪುರ | 45 | ಕೆ.ಆರ್.ಪುರಂ |

ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಲ್ಲಿ ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯ ರೂಪ ಸಂಪೂರ್ಣ ಬದಲಾಗಲಿದೆ.

- **ಸಾಮಾಜಿಕ ಕಾರ್ಯಗಳಿಗೆ ಆರ್ಥಿಕ ಬೆಂಬಲ:**

ಬೆಂಮಸಾಸಂಸ್ಥೆಯು ಸಮಾಜದ ಕೆಳವರ್ಗದ, ಅವಕಾಶ ವಂಚಿತ ವರ್ಗದವರಿಗೆ ಆರ್ಥಿಕ ಬೆಂಬಲ ನೀಡುವ ಕಾರ್ಯವನ್ನು ನಿರ್ವಹಿಸುತ್ತಿದೆ. ಸಾಮಾಜಿಕ ಪಿಡುಗುಗಳಾದ ಪೋಲೀಯೋ, ಏಡ್ಸ್ ಇತ್ಯಾದಿಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ಥಳಾವಕಾಶ ಮತ್ತು ವಾಹನಗಳ ವ್ಯವಸ್ಥೆಯನ್ನು ಸಹ ಒದಗಿಸುತ್ತಿದೆ.

ಅ) 2007–08 ನೇ ಸಾಲಿನಲ್ಲಿ ***ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ*** ರವರಿಗೆ ಬೆಂಮಸಾಸಂಸ್ಥೆಯು 7.00 ಲಕ್ಷಗಳ ಆರ್ಥಿಕ ಸಹಾಯ ಮಾಡಿರುತ್ತದೆ.

ಆ)ಕೊಳಚೆ ಪ್ರದೇಶದ ಮಕ್ಕಳಿಗೆ ವಿದ್ಯಾಭ್ಯಾಸದ ಅರಿವು ಮೂಡಿಸಲು ಎರಡು ಬಸ್ಸುಗಳನ್ನು ಶಿಕ್ಷಣ ಇಲಾಖೆಗೆ ಕೊಡುಗೆಯಾಗಿ ನೀಡಿರುತ್ತದೆ.

ಇ)ಪರಿಸರ ಸಂರಕ್ಷಣೆ ಕಾರ್ಯಕ್ಕಾಗಿ ಸಾರಿಗೆ ಇಲಾಖೆಗೆ ಎರಡು ಬಸ್ಸುಗಳನ್ನು ಕೊಡುಗೆಯಾಗಿ ನೀಡಿರುತ್ತದೆ.

- **ಆಸನ ಕಾಯ್ದಿರಿಸುವಿಕೆ :**

ಮಹಿಳೆಯರಿಗೆ, ಅಂಗವಿಕಲರಿಗೆ ಹಾಗೂ ಹಿರಿಯ ನಾಗರೀಕರಿಗೆ ಆಸನ ಕಾಯ್ದಿರಿಸುವ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ , ಸಂಸ್ಥೆಯು ತನ್ನ ಎಲ್ಲಾ ಸಾಮಾನ್ಯ ಬಸ್ಸುಗಳಲ್ಲಿ ಆಸನಗಳನ್ನು ಕಾಯ್ದಿರಿಸಲಾಗಿದ್ದು, ಸದರಿ ಆಸನಗಳನ್ನು ಬೇರೆಯವರು ಆಕ್ರಮಿಸದಂತೆ ಬಸ್ಸಿನ ಚಾಲಕ/ನಿರ್ವಾಹಕರಿಗೆ ಸಿಬ್ಬಂದಿಗೆ, ಸಾರಥಿ ದಳಕ್ಕೆ ಮತ್ತು ಮಾರ್ಗ ತನಿಖಾ ದಳದ ಸಿಬ್ಬಂದಿಗೆ ಸ್ಪಷ್ಟ ಸೂಚನೆಯನ್ನು ನೀಡಿ, ಆಗಿಂದಾಗ್ಗೆ ಈ ಬಗ್ಗೆ ತಪಾಸಣೆ ನಡೆಸಿ, ಸದರಿ ಮೀಸಲಾತಿಯ ಅನುಷ್ಠಾನವನ್ನು ಉಲ್ಲಂಘಿಸಿದವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ. ಮೀಸಲಾತಿಯ ವಿವರಗಳು ಈ ಕೆಳಕಂಡಂತಿವೆ.

೧. **ಮಹಿಳಾ ಮೀಸಲು :** ಎಲ್ಲಾ ಸಾಮಾನ್ಯ ಹಾಗೂ ಪರಿಸರವಾಹಿನಿ ಬಸ್ಸುಗಳಲ್ಲಿನ ಮುಂದಿನ 16 ಆಸನಗಳನ್ನು ಮಹಿಳೆಯವರಿಗೆ ಮೀಸಲಿರಿಸಲಾಗಿದೆ. ಈ ಆಸನಗಳಿಗೆ ಪ್ರತ್ಯೇಕ ಬಣ್ಣ ಬಳಿದಿದ್ದು ***"ಮಹಿಳೆಯರಿಗೆ ಮಾತ್ರ"*** ಎಂಬ ಬರಹಗಳನ್ನು ಬರೆಸಲಾಗಿದೆ.

೨. **ಹಿರಿಯ ನಾಗರೀಕರಿಗೆ:** ಎಲ್ಲಾ ಸಾಮಾನ್ಯ ಹಾಗೂ ಪರಿಸರವಾಹಿನಿ ಬಸ್ಸುಗಳಲ್ಲಿ ನಾಲ್ಕು ಆಸನಗಳನ್ನು ಮೀಸಲಿರಿಸಲಾಗಿದೆ. ಈ ರೀತಿ ಮೀಸಲಿರಿಸಿದ ಆಸನಗಳಿಗೆ ***"ಹಿರಿಯ ನಾಗರೀಕರಿಗೆ "*** ಎಂದು ಬರೆಸಲಾಗಿದೆ.

೩. **ಅಂಗವಿಕಲ ಪ್ರಯಾಣಿಕರಿಗೆ:** ಎಲ್ಲಾ ಸಾಮಾನ್ಯ ಮತ್ತು ಪರಿಸರವಾಹಿನಿ ಬಸ್ಸುಗಳಲ್ಲಿ ಮುಂದಿನ ಬಾಗಿಲು ಹಾಗೂ ಹಿಂದಿನ ಬಾಗಿಲ ಬಳಿ ತಲಾ ಒಂದೊಂದು ಆಸನವನ್ನು ***"ಅಂಗವಿಕಲ ಪ್ರಯಾಣಿಕರಿಗಾಗಿ"*** ಮೀಸಲಿರಿಸಲಾಗಿದೆ.

-

- **ಪರಿಸರ ರಕ್ಷಣೆ :**

ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಸ್ವಚ್ಛ ಹಾಗೂ ಮಾಲಿನ್ಯ ರಹಿತ ಪರಿಸರ ನಿರ್ಮಿಸಲು ಸಂಸ್ಥೆಯು ಸಾಮಾಜಿಕ ಹೊಣೆಗಾರಿಕೆಯನ್ನು ಹೊತ್ತು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡಿರುತ್ತದೆ.

ಅ) ಕಡಿಮೆ ಪ್ರಮಾಣದ ಗಂಧಕ ಮಿಶ್ರಿತ ಇಂಧನವನ್ನು ವಾಹನಗಳಿಗೆ ಬಳಸುವುದು.

ಆ) ಇತರ ರಾಜ್ಯಗಳಿಗೆ ಹೋಲಿಸಿದಲ್ಲಿ ಸಂಸ್ಥೆಯು ಹೊಸ ವಾಹನ ಬಲವನ್ನು ಹೊಂದಿರುತ್ತದೆ.

ಇ) ವಾಹನಗಳಲ್ಲಿ ಯೂರೋ-2 ಮತ್ತು ಯೊರೋ-3 ಮಾದರಿಯ ಇಂಜಿನ್‌ಗಳನ್ನು ಬಳಕೆ

ಉ) ಸಂಸ್ಥೆಯ ಎಲ್ಲಾ ವಾಹನಗಳನ್ನು ತಿಂಗಳಿಗೊಮ್ಮೆ ವಾಯುಮಾಲಿನ್ಯ ತಪಾಸಣೆಗೆ ಒಳಪಡಿಸುವುದು. ಅವಶ್ಯವಿದ್ದಲ್ಲಿ ದುರಸ್ತಿಗೊಳಿಸುವುದು. ಸಾರ್ವಜನಿಕ ಪ್ರಯಾಣಿಕರಿಗೆ ಪ್ರೋತ್ಸಾಹದಾಯಕವಾಗಿ ನಿಗದಿತ ಮಟ್ಟವನ್ನು ಮೀರಿ ಹೊಗೆ ಉಗುಳುವ ಬಸ್ಸುಗಳ ಬಗ್ಗೆ ಮಾಹಿತಿ ನೀಡುವ ಸಾರ್ವಜನಿಕರಿಗೆ ನಗದು ಬಹುಮಾನ.

ಊ) ವಾಹನಗಳಲ್ಲಿ ಹೊಂಗೆ ಎಣ್ಣೆಯ ಪ್ರಾಯೋಗಿಕ ಬಳಕೆ

- **ಸಾರಥಿ ಗಸ್ತು ಪಡೆ:** ಬಸ್ಸಿನ ಆಚರಣೆ ಹಾಗೂ ಸಿಬ್ಬಂದಿಯಲ್ಲಿನ ಅಶಿಸ್ತು ನಿವಾರಣೆಯ ಉದ್ದೇಶ ದಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು "ಸಾರಥಿ" ಹೆಸರಿನಲ್ಲಿ ರಸ್ತೆ ಗಸ್ತು ತಂಡಗಳನ್ನು ರಚಿಸಿ ಆಚರಣೆಗೆ ತರಲಾಗಿದೆ. ಈ ತಂಡಗಳಿಗೆ ಚಾಲಕರಲ್ಲಿ ಸಂಚಾರದ ಶಿಸ್ತನ್ನು ಮೂಡಿಸುವುದು, ಆಚರಣೆಗೆ ಸಂಬಂಧಿಸಿದ ಸಾರ್ವಜನಿಕ ದೂರುಗಳ ಬಗ್ಗೆ ಸ್ಪಂದಿಸುವುದು, ವಿಶೇಷ ಆಚರಣೆಯ ಬಗ್ಗೆ ಉಸ್ತುವಾರಿ, ಅಪಘಾತ ಇತ್ಯಾದಿ ತುರ್ತು ಸಂದರ್ಭಗಳಲ್ಲಿ ಸ್ಥಳಕ್ಕೆ ಧಾವಿಸಿ ಪ್ರಾಥಮಿಕ ಉಪಚಾರ ಇತ್ಯಾದಿ ಕರ್ತವ್ಯಗಳಿಗಾಗಿ ನೇಮಿಸಲಾಗಿದೆ. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ವಲಯವಾರು ಸಾರಥಿ ತಂಡಗಳ ದೂರವಾಣಿ ಸಂಖ್ಯೆಗಳನ್ನು ಪತ್ರಿಕಾ ಪ್ರಕಟನೆಯ ಮೂಲಕ ಪ್ರಕಟಿಸಲಾಗಿದೆ.

**ಸಾರಥಿ ಗಸ್ತು ವಾಹನ ಪಡೆಯ ದೂರವಾಣಿ ಸಂಖ್ಯೆಗಳು ಈ ಕೆಳಕಂಡಂತಿವೆ :**

| | | |
|---|---|---|
| **ಸಾರಥಿ-1** | **ಹೆಚ್‌ಎಎಲ್ / ವೈಟ್‌ಫೀಲ್ಡ್ ರಸ್ತೆ**<br>ದೊಮ್ಮಲೂರು, ಇಂದಿರಾನಗರ, ವೈಟ್‌ಫೀಲ್ಡ್, ಮಾರತ್‌ಹಳ್ಳಿ, ವರ್ತೂರು, ಕಾಡುಗೋಡಿ, ಹೋಪ್ ಫಾರಂ | 9480840251 |
| **ಸಾರಥಿ-2** | **ಸರ್ಜಾಪುರ ರಸ್ತೆ**<br>ಮಡಿವಾಳ, ಹೆಚ್‌ಎಸ್‌ಆರ್ ಲೇಔಟ್, ಅಗರ, ಸರ್ಜಾಪುರ) | 9480840252 |
| **ಸಾರಥಿ-3** | **ಹೊಸೂರು ರಸ್ತೆ**<br>ಮಡಿವಾಳ, ಬೊಮ್ಮನಹಳ್ಳಿ, ಹೊಸರೋಡ್, ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಚಂದಾಪುರ | 9480840253 |
| **ಸಾರಥಿ-4** | **ಬನ್ನೇರುಘಟ್ಟ /ಆನೇಕಲ್ ರಸ್ತೆ**<br>ಡೈರಿ ಸರ್ಕಲ್, ಮೈಕೊ ಲೇಔಟ್, ಹುಳಿಮಾವು, ಬನ್ನೇರುಘಟ್ಟ, ಜಿಗಣಿ, ಹಾರಗದ್ದೆ, ಆನೇಕಲ್ | 9480840254 |
| **ಸಾರಥಿ-5** | ಕನಕಪುರ ರಸ್ತೆ<br>ಯಡಿಯೂರು, ಬನಶಂಕರಿ, ದೇವೇಗೌಡ ಪೆಟ್ರೋಲ್ ಬಂಕ್,ಉತ್ತರಹಳ್ಳಿ, ಕೋಣನಕುಂಟೆ ಕ್ರಾಸ್, ಅಂಜನಾಪುರ, ಜಂಬೂಸವಾರಿ ದಿಣ್ಣೆ, ಜೆ.ಪಿ.ನಗರ, ಕಗ್ಗಲೀಪುರ, ಸೋಮನಹಳ್ಳಿ | 9480840255 |
| **ಸಾರಥಿ-6** | ಮೈಸೂರು ರಸ್ತೆ | 9480840256 |

| | | |
|---|---|---|
| | ಕೆ.ಆರ್.ಮಾರ್ಕೆಟ್, ಎಂಸಿಟಿಸಿ, ಚಂದ್ರಾಲೇಔಟ್, ನಾಗರಬಾವಿ, ಕೆಂಗೇರಿ ಉಪನಗರ, ಕೆಂಗೇರಿ, ದೊಡ್ಡ ಆಲದ ಮರ, ಬಿಇಎಂಎಲ್ ಲೇಔಟ್, ಬಿಡದಿ | |
| **ಸಾರಥಿ–7** | ಮಾಗಡಿ ರಸ್ತೆ<br>ಕೆಬಿಎಸ್, ಮಾಗಡಿ ರಸ್ತೆ, ಟೋಲ್‌ಗೇಟ್, ವಿಜಯನಗರ, ಸುಕಂದಕಟ್ಟೆ, ಅಂಜನಾಪುರ, ತಾವರೆಕೆರೆ, ರಾಜಾಜಿನಗರ 6ನೇ ಬ್ಲಾಕ್ | 9480840257 |
| **ಸಾರಥಿ–8** | ನೆಲಮಂಗಲ/ತುಮಕೂರು ರಸ್ತೆ<br>ಕೆಬಿಎಸ್, ಮಲ್ಲೇಶ್ವರಂ, ಯಶವಂತಪುರ, ಜಾಲಹಳ್ಳಿ, ಪೀಣ್ಯ 8ನೇ ಮೈಲಿ, ಅರಿಶಿನಕುಂಟೆ, ನೆಲಮಂಗಲ | 9480815018 |
| **ಸಾರಥಿ–9** | ಯಲಹಂಕ/ಬಳ್ಳಾರಿ ರಸ್ತೆ<br>ಗುಟ್ಟಹಳ್ಳಿ, ಹೆಬ್ಬಾಳ, ಬ್ಯಾಟರಾಯನಪುರ, ಎನ್‌ಇಎಸ್, ಯಲಹಂಕ ಉಪನಗರ, ಬಿಇಎಲ್, ವಿದ್ಯಾರಣ್ಯಪುರ, ರಾಜಾನುಕುಂಟೆ, ಚಿಕ್ಕಜಾಲಾ, ದೇವನಹಳ್ಳಿ ವಿಮಾನ ನಿಲ್ದಾಣ | 9480815019 |
| **ಸಾರಥಿ–10** | ಹೊಸಕೋಟೆ/ಕೋಲಾರ ರಸ್ತೆ<br>ಶಿವಾಜಿನಗರ, ಹಲಸೂರು, ಟ್ಯಾನರಿ ರಸ್ತೆ, ಕಲ್ಯಾಣನಗರ, ಕೆ.ಆರ್.ಪುರಂ, ಹೊಸಕೋಟೆ | 9480815026 |
| **ಸಾರಥಿ–11** | ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್<br>ಕೃ.ರಾ.ಮಾರುಕಟ್ಟೆ, ಕೆಂಪೇಗೌಡ ಬಸ್ ನಿಲ್ದಾಣ, ಶಿವಾಜಿನಗರ | 9480815050 |

- ಈ ಸಾರಥಿ ಗಸ್ತು ತಂಡಗಳು ದಿನವಹಿ ಪಾಳಿಗಳಲ್ಲಿ ಬೆಳಿಗ್ಗೆ 0600 ಗಂಟೆಯಿಂದ 2200 ಗಂಟೆಯವರೆಗೆ ಕೆಲಸ ನಿರ್ವಹಿಸುತ್ತವೆ.

ಈ ಸಾರಥಿ ಗಸ್ತು ತಂಡಗಳಿಗೆ ಬಸ್ಸುಗಳಿಗೆ ಮಾರ್ಗ ಫಲಕಗಳನ್ನು ಸರಿಯಾದ ರೀತಿಯಲ್ಲಿ ಪ್ರದರ್ಶಿಸದೇ ಇರುವುದು, ಮಾರ್ಗಫಲಕಗಳಿಗೆ ಸರಿಯಾದ ರೀತಿಯಲ್ಲಿ ಬೆಳಕನ್ನು ಒದಗಿಸದೇ ಇರುವುದು, ಬಸ್ಸುಗಳ ಸ್ವಚ್ಚತೆ, ನಿಗಧಿತ ಬಸ್ಸು ನಿಲುಗಡೆಗಳಲ್ಲಿ ಬಸ್ಸುಗಳನ್ನು ನಿಲ್ಲಿಸದೇ ಹೋಗುವುದು, ಸಿಬ್ಬಂದಿಯ ದುರ್ವತನೆ ಹಾಗೂ ಸಂಚಾರ ನಿಯಮಗಳನ್ನು ಉಲ್ಲಂಘಿಸುವುದು ಇತ್ಯಾದಿ ವಿಷಯಗಳ ಬಗ್ಗೆ ಸಂಬಂಧಿಸಿದ ದೂರುಗಳನ್ನು ಮೇಲ್ಕಂಡ ದೂರವಾಣಿ ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದಾಗಿದೆ.

- **ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ :** ಬೆಂಮಸಾಸಂಸ್ಥೆಯು ಘಟಕ, ಬಸ್ ನಿಲ್ದಾಣ, ನಿಯಂತ್ರಣ ಕೊಠಡಿ ಮತ್ತು ಕೇಂದ್ರ ಕಛೇರಿಗಳಲ್ಲಿ ಸಾರ್ವಜನಿಕ ದೂರುಗಳನ್ನು ಮೌಖಿಕವಾಗಿ, ದೂರವಾಣಿ ಮುಖಾಂತರ, ಲಿಖಿತ ರೂಪದಲ್ಲಿ, ಪತ್ರಿಕಾ ಪ್ರಕಟಣಾ ಮೂಲಕ ಅಥವಾ ಇ–ಮೇಲ್ ಮೂಲಕ ಸ್ವೀಕರಿಸುವ ವ್ಯವಸ್ಥೆ ಮಾಡಿರುತ್ತದೆ. ಸಾರ್ವಜನಿಕರ ದೂರುಗಳಿಗೆ ತಕ್ಷಣವೇ ಸ್ಪಂದಿಸುವ ಕಾರ್ಯವನ್ನು ಸಹ ಸಂಸ್ಥೆಯು ನಿರ್ವಹಿಸುತ್ತಿದೆ.

    ಸಾರ್ವಜನಿಕರು ಬೆಂಮಸಾಸಂಸ್ಥೆಯ ಬಗ್ಗೆ ಕುಂದುಕೊರತೆ/ದೂರುಗಳು ಮತ್ತು ಸಂಸ್ಥೆಯ ಸೇವೆಯನ್ನು ಉತ್ತಮಪಡಿಸುವ ಸಲಹೆ ನೀಡಲು ಅನುಕೂಲವಾಗುವಂತೆ ಕಾಲ್‌ಸೆಂಟರ್‌ನ್ನು ಪ್ರಾರಂಭಿಸಿದೆ. ಇದು ವಾರದ ಎಲ್ಲಾ ದಿನಗಳಲ್ಲಿ ಬೆಳಿಗ್ಗೆ 800 ಗಂಟೆಯಿಂದ 2000 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ. ಕಾಲ್ ಸೆಂಟರ್‌ನ ಟೋಲ್ ಫ್ರೀ ದೂರವಾಣಿ ಸಂಖ್ಯೆ 12667/22108304.

- **ಸಾರ್ವಜನಿಕ ಸಂಪರ್ಕ** : ಬೆಂಮಸಾಸಂಸ್ಥೆಯು ತನ್ನ ಪ್ರಯಾಣಿಕರ ಸಾರಿಗೆ ಬೇಡಿಕೆಗಳ ಬಗ್ಗೆ ತಿಳಿಯಲು ಸಾರ್ವಜನಿಕ ಕುಂದುಕೊರತೆ ಸಭೆಗಳನ್ನು ಆಗಿಂದ್ದಾಗ್ಗೆ ನಡೆಸುತ್ತಿದೆ. ನಾಗರೀಕರ

ಹಿತರಕ್ಷಣಾ ವೇದಿಕೆ, ಸ್ಥಳೀಯ ಜನಪ್ರತಿನಿಧಿಗಳು, ಮಾಧ್ಯಮದವರ ಸಹಯೋಗದೊಂದಿಗೆ ಈ ಕಾರ್ಯಕ್ರಮಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಮ್ಮಿಕೊಳ್ಳುತ್ತಿದ್ದು, ಸಾರ್ವಜನಿಕರ ಬೇಡಿಕೆಯನ್ನು ಹತ್ತಿರದಿಂದ ಪರಿಶೀಲಿಸುವ ಕಾರ್ಯವೈಖರಿ ಇದಾಗಿರುತ್ತದೆ. ಇದರಿಂದ ಸಂಸ್ಥೆ ಮತ್ತು ಸಾರ್ವಜನಿಕರ ನಡುವೆ ಉತ್ತಮ ಬಾಂಧವ್ಯ ಬೆಳೆಯಲು ಅನುಕೂಲವಾಗಿ ಪಾರದರ್ಶಕತೆಗೆ ಅವಕಾಶವಿರುತ್ತದೆ.

**9. ಪ್ರಯಾಣಿಕ ಸ್ನೇಹಿ ಅವಿಷ್ಕಾರಗಳು** :

- **ವೇಳಾಪಟ್ಟಿಯ ಪ್ರದರ್ಶನ** : ಸಂಸ್ಥೆಯ ಮುಖ್ಯ ಬಸ್ ನಿಲ್ದಾಣಗಳಿಂದ ಹೊರಡುವ ಎಲ್ಲಾ ಅನುಸೂಚಿಗಳ ವೇಳಾಪಟ್ಟಿಯನ್ನು ಆಯಾ ಬಸ್ ನಿಲ್ದಾಣಗಳಲ್ಲಿ ಮಾಹಿತಿ ಫಲಕಗಳಲ್ಲಿ ಸಾರ್ವಜನಿಕ ಪ್ರಯಾಣಿಕರ ಮಾಹಿತಿಗಾಗಿ ಪ್ರದರ್ಶಿಸಲಾಗುತ್ತದೆ.

- **ವಿಚಾರಣಾ ಕಂಡಿಗಳು** : ಸಾರ್ವಜನಿಕ ಪ್ರಯಾಣಿಕರಿಂದ ದೂರು ಮತ್ತು ಸಲಹೆಗಳನ್ನು ಸ್ವೀಕರಿಸಲು ವಿಚಾರಣಾ ಕಿಂಡಿಗಳನ್ನು ಸ್ಥಾಪಿಸಲಾಗಿದೆ. ಈ ವಿಚಾರಣಾ ಕಿಂಡಿಗಳಲ್ಲಿ ಆಯಾ ಬಸ್ ನಿಲ್ದಾಣಗಳಲ್ಲಿನ ಆಚರಣೆಗೆ ಸಂಬಂಧಿಸಿದ ಮತ್ತು ಅಲ್ಲಿ ಪ್ರಯಾಣಿಕರಿಗಾಗಿ ಒದಗಿಸಲಾಗಿರುವ ಇತರ ಸೌಲಭ್ಯಗಳು, ವಿತರಣೆ ಮಾಡಲಾಗುವ ಸಾರ್ವಜನಿಕ ಪಾಸುಗಳು, ವಿದ್ಯಾರ್ಥಿ ಪಾಸುಗಳು, ಇತ್ಯಾದಿಗಳ ಬಗ್ಗೆ ಮಾಹಿತಿಗಳನ್ನು ಒದಗಿಸಲಾಗುತ್ತದೆ. ಈ ಕಿಂಡಿಗಳಲ್ಲಿ ಸಾರ್ವಜನಿಕ ಪ್ರಯಾಣಿಕರು ಬಸ್ ನಿಲ್ದಾಣಗಳಲ್ಲಿನ ಸ್ವಚ್ಛತೆ, ಸೌಲಭ್ಯಗಳು, ಬಸ್ಸುಗಳ ಆಚರಣೆ, ಸಿಬ್ಬಂದಿಗಳ ವರ್ತನೆ ಇತ್ಯಾದಿಗಳ ಬಗ್ಗೆ ತಮ್ಮ ಸಲಹೆ ದೂರುಗಳನ್ನು ಆಯಾ ಕಿಂಡಿಗಳಲ್ಲಿ ದೊರೆಯುವ ದೂರು/ಸಲಹೆಗಳ ಬಗ್ಗೆ ದೊರೆಯುವ ವಿಶೇಷ ನಮೂನೆಗಳಲ್ಲಿ ನೀಡಿ ಸ್ವೀಕೃತಿ ಪ್ರತಿ ಪಡೆಯಬಹುದಾಗಿದೆ.

- **ವಾಹನಗಳಿಗೆ ಸ್ವಯಂಚಾಲಿತ ಬಾಗಿಲುಗಳ ಅಳವಡಿಕೆ** : ತನ್ನ ಪ್ರಯಾಣಿಕರ ಸುರಕ್ಷಾ ಪ್ರಯಾಣಕ್ಕಾಗಿ ತನ್ನ ವಾಹನಗಳಿಗೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದೆ. ಈ ಬಾಗಿಲುಗಳ ಕಾರ್ಯಾಚರಣೆಯನ್ನು ಚಾಲಕರು ನಿರ್ವಹಿಸಲಿದ್ದು, ಬಸ್ ನಿಲುಗಡೆಗಳಲ್ಲಿ ವಾಹನವನ್ನು ನಿಲ್ಲಿಸಿದ ಮೇಲೆ ಮತ್ತು ವಾಹನ ಹೊರಡುವ ಮುಂಚೆ ಬಾಗಿಲನ್ನು ಮುಚ್ಚಲು ಚಾಲಕರಿಗೆ ನಿರ್ದೇಶನ ನೀಡಲಾಗಿದೆ.
- **ಪ್ರಥಮ ಚಿಕಿತ್ಸಾ ಮತ್ತು ಸಲಹಾ ಪೆಟ್ಟಿಗೆ** : ಎಲ್ಲಾ ಬಸ್ಸುಗಳಿಗೆ ಉತ್ತಮ ಗುಣಮಟ್ಟದ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳನ್ನು ಅಳವಡಿಸಲಾಗಿದೆ ಹಾಗೂ ಸಾರ್ವಜನಿಕರು ತಮ್ಮ ಸಲಹೆಗಳನ್ನು ನೀಡಲು ಬಸ್ಸುಗಳಲ್ಲಿ ಸಲಹಾ ಪೆಟ್ಟಿಗೆಗಳನ್ನು ಅಳವಡಿಸಲಾಗಿರುತ್ತದೆ.

- **ಮಾರ್ಗಸೂಚಿ ಫಲಕಗಳು/ಎಲ್‌ಇಡಿ ಫಲಕಗಳು** : ಮಾರ್ಗಗಳ ಬಗ್ಗೆ ಸಂಕ್ಷಿಪ್ತ ವಿವರ ನೀಡಲು ಎಲ್‌ಇಡಿ ಮಾದರಿಯ ಮಾರ್ಗಸೂಚಿ ಫಲಕಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಇದನ್ನು ಪ್ರಾಯೋಗಿಕವಾಗಿ ಕೆಲವು ಮಾರ್ಗಗಳಲ್ಲಿ ಪರಿಚಯಿಸಲಾಗಿದೆ.

- **ಎಲ್‌ಸಿಡಿ** : ಮತ್ತೊಂದು ಪ್ರಯಾಣಿಕ ಸ್ನೇಹಿ ಸೌಲಭ್ಯವಾದ ಎಲ್‌ಸಿಡಿ ವ್ಯವಸ್ಥೆಯನ್ನು ತನ್ನ ವೋಲ್ವೊ ಬಸ್ಸುಗಳಲ್ಲಿ ಪರಿಚಯಿಸಿದೆ. ಇದರಿಂದ ಪ್ರಯಾಣಿಕರಿಗೆ ಮಾರ್ಗದ ಬಗ್ಗೆ ಸಂಪೂರ್ಣ ಮಾಹಿತಿ ದೊರಕಿದಂತಾಗುತ್ತದೆ ಮತ್ತು ವಾಣಿಜ್ಯ ಜಾಹಿರಾತುಗಳಿಂದ ಸಂಸ್ಥೆಗೆ ಆದಾಯ ತರುವಂತದ್ದಾಗಿದೆ.

- **ಪ್ರಯಾಣಿಕ ಮಾಹಿತಿ ವ್ಯವಸ್ಥೆ** : ಪ್ರಸ್ತುತ ಸಂಸ್ಥೆಯು ತನ್ನ ಸೇವೆಯ ಅಂಕಿಅಂಶಗಳ ಬಗ್ಗೆ ಪ್ರಯಾಣಿಕರಿಗೆ ಮಾಹಿತಿಯನ್ನು ನೀಡುತ್ತಿದೆ. ಪ್ರಯಾಣಿಕರು ಬೆಂಮಸಾಸಂಸ್ಥೆಯ ಬಸ್ಸುಗಳಿಗೆ

ಕಾಯುವುದನ್ನು ತಡೆಯಲು ಪ್ರಾಯೋಗಿಕವಾಗಿ ***ರಿಯಲ್ ಟೈಮ್ ಪ್ಯಾಸೆಂಜರ್ ಇನ್‌ಫರ್‌ಮೇಶನ್ ಸಿಸ್ಟಮ್‌***ನ್ನು ಸಂಸ್ಥೆಯು ಮಾಹಿತಿ ತಂತ್ರಜ್ಞಾನದ ಮೂಲಕ ಜಿಪಿಎಸ್ ಬಳಕೆಯಿಂದ ಅಭಿವೃದ್ದಿಗೊಳಿಸುತ್ತಿದೆ. ವೋಲ್ವೊ ಬಸ್ಸುಗಳ ಮೇಲೆ ಪ್ರಾಯೋಗಿಕ ಕಾರ್ಯ ನಡೆದಿರುತ್ತದೆ ಮತ್ತು ಎಲ್ಲಾ ಬಸ್ ನಿಲುಗಡೆಗಳಲ್ಲಿ ಈ ರೀತಿಯ ಮಾಹಿತಿ ನೀಡುವ ಕಾರ್ಯವನ್ನು ಯೋಜಿಸಲಾಗಿದೆ.

- **ಇಂಟರ್ ನೆಟ್ ಮೂಲಕ ಮಾರ್ಗಗಳ ಸಂಖ್ಯೆ ಸಂಖ್ಯೆ ಮತ್ತು ಜಿಐಎಸ್ ಮಾರ್ಗ ನಕ್ಷೆ ಪ್ರದರ್ಶನ:** ಇಂಟರ್ ನೆಟ್ ವ್ಯವಸ್ಥೆಯ ಮೂಲಕ ತಾವು ಹೊರಡಬೇಕಾದ ಬಸ್ಸಿನ ಸ್ಥಳ, ತಲುಪುವ ಸ್ಥಳ, ವಿವರಗಳು ದೊರಕುತ್ತವೆ. ಸಂಸ್ಥೆಯ ವೆಬ್ ಸೈಟ್ (www.bmtc.info.com) ಮೂಲಕ ಇಂಟರ್‌ನೆಟ್‌ನಲ್ಲಿ ಮಾಹಿತಿ ಪಡೆಯಬಹುದು. ಅಲ್ಲದೇ ಸದರಿ ಮಾರ್ಗದ ಮಾರ್ಗ ನಕ್ಷೆಯನ್ನು ಸಹ ಪರದೆಯ ಮೇಲೆ ನೋಡಬಹುದಾಗಿದೆ.
